# KARNATAKA ICSE SCHOOLS ASSOCIATION

## ICSE STD.X Preparatory Examination 2024

**Subject: II Language Kannada**

**(Key Answer)**

**Duration: 3Hrs.** **Date:**

---

This paper comprises of two Sections: **Section A and Section B.**
Attempt all the questions from **Section A.** Attempt **four** questions from **Section B,** answering at least **one** question Each from the **two** books you have studied and **any two** other questions from the same books that you have compulsorily chosen.
The intended marks for questions or parts of questions are given in brackets [ ]

---

**Section-A (40 Marks)**

Attempt **all** Questions

---

**Questions 1:**

Write a short composition in kannada of approximately 250 words on any one of the following topics:

**ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ ನಿಮಗೆ ಬೇಕಾದ ಒಂದು ವಿಷಯವನ್ನು ಆರಿಸಿಕೊಂಡು ಸುಮಾರು ೨೫೦ ಪದಗಳ ಸಂಕ್ಷಿಪ್ತ ಪ್ರಬಂಧ ಬರೆಯಿರಿ.** **[15]**

1. ಕೋಪ ಎನ್ನುವುದು 'ಬೆಂಕಿ' ಇದ್ದ ಹಾಗೆ, ಅದು ಹೊತ್ತಿ ಉರಿಯುತ್ತದೆ. ಅದನ್ನು ನಂದಿಸಬಹುದು. ಆದರೆ ಅದರಿಂದಾಗುವ ಅನಾಹುತವನ್ನು ಬದಲಿಸಲು ಸಾಧ್ಯವಿಲ್ಲ ಎನ್ನುವುದನ್ನು ತಿಳಿಸುವ ಒಂದು ಕಥೆಯನ್ನು ಪ್ರಬಂಧ ರೂಪದಲ್ಲಿ ಬರೆಯಿರಿ.
2. ಜೀವನದಲ್ಲಿ ವಿದ್ಯೆ ಅಥವಾ ಶಿಕ್ಷಣಕ್ಕಿರುವ ಮಹತ್ವ – ನಿಮ್ಮ ಮೇಲೆ ಶಿಕ್ಷಕರು ನೀಡಿರುವ ಪರಿಣಾಮ, ಅದರಿಂದ ನಿಮ್ಮಲ್ಲಾದ ಬದಲಾವಣೆ ಇತ್ಯಾದಿಗಳನ್ನು ವಿವರಿಸಿ ಒಂದು ಪ್ರಬಂಧ ಬರೆಯಿರಿ.
3. 'ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ'–ಈ ಗಾದೆ ಮಾತನ್ನು ವಿವರಿಸಿ – ಈ ಉಕ್ತಿಯನ್ನು ಆಧರಿಸಿ ಒಂದು ಕಥೆಯೊಂದಿಗೆ ವಿವರಿಸಿ.
4. ವಿರಾಮದ ಸಮಯವನ್ನು ಕಳೆಯಲು ಆಟಗಳು ಅತ್ಯುತ್ತಮ ಮಾರ್ಗ ಎನ್ನುವುದಾದರೆ ಆಟಗಳಿಂದ ನಮಗಾಗುವ ಲಾಭಗಳೇನು? ನೀವು ಇಷ್ಟಪಡುವ ಆಟ ಯಾವುದು? ಅದರ ನಿಯಮಗಳೇನು? ಅದರಲ್ಲಿ ಸಾಧನೆ ಮಾಡಿದ ಆಟಗಾರನನ್ನು ಕುರಿತು ಪ್ರಬಂಧ ಬರೆಯಿರಿ.
5. ಕೆಳಗೆ ಕೊಟ್ಟಿರುವ ಚಿತ್ರವನ್ನು ಜಾಗರೂಕರಾಗಿ ಅಧ್ಯಯನ ಮಾಡಿ, ಈ ಚಿತ್ರವನ್ನು ಆಧರಿಸಿ ಒಂದು ಕಥೆಯೊಂದಿಗೆ ಅಥವಾ ಪ್ರಸಂಗವನ್ನು ಬರೆಯಿರಿ ಚಿತ್ರಕ್ಕೂ ನಿಮ್ಮ ವರ್ಣನೆಗೂ ಸ್ಪಷ್ಟವಾದ ಸಂಬಂಧವಿರಬೇಕು.



**[ವಿದ್ಯಾರ್ಥಿಗಳ ಬರವಣಿಗೆಯಲ್ಲಿ ಆಯಾ ವಿಷಯಕ್ಕೆ ಅನುಗುಣವಾದ ವಿವರಣೆ: ಪೀಠಿಕೆ** 2½ **ಅಂಕಗಳು; ವಿಷಯ ವಿವರಣೆ–6 ಅಂಕಗಳು; ಭಾಷಾಪ್ರಯೋಗ–4 ಅಂಕಗಳು; ಮುಕ್ತಾಯ** 2½ **ಅಂಕಗಳು; ವಾಕ್ಯ ರಚನೆ , ವಿಷಯದ ಸ್ಪಷ್ಟ ವಿವರಣೆ, ಮುಂತಾದ ಪ್ರಬಂಧ ನಿಯಮಗಳನ್ನು ಅನುಸರಿಸಿ ಅಂಕಗಳನ್ನು ನೀಡುವುದು.]**

**Questions 2:**

**Write a letter in kannada of approximately 120 words on any one of the following topics:**

**ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ ನಿಮಗೆ ಬೇಕಾದ ಒಂದು ವಿಷಯವನ್ನು ಆರಿಸಿಕೊಂಡು ಸುಮಾರು ೧೨೦ ಪದಗಳಲ್ಲಿ ಒಂದು ಪತ್ರವನ್ನು ಬರೆಯಿರಿ.** **[7]**

1. ನಿಮ್ಮ ಶಾಲೆಯಲ್ಲಿ ಆಚರಿಸಿದ '**ಶಿಕ್ಷಕರ ದಿನಾಚರಣೆ**'ಯ ಸಂಭ್ರಮವನ್ನು ವಿವರಿಸುತ್ತಾ ನಿಮ್ಮ ಗೆಳೆಯನಿಗೊಂದು ಪತ್ರ ಬರೆಯಿರಿ.

   ಉ: ಖಾಸಗಿ ಪತ್ರ:

   (ಕ್ಷೇಮ, ಶ್ರೀ, ದಿನಾಂಕ, ಸ್ಥಳ: 1 — ಭಾಷೆ: 2
   ಸಂಭೋದನೆ: ½ — ಧನ್ಯವಾದಗಳು: ½
   ಪತ್ರದ ಒಡಲು– ವಿಷಯ ವಿವರಣೆ: 2 — ಮುಕ್ತಾಯ: ½
   ಹೊರವಿಳಾಸ: ½

2. ನೀವು **ಜೀ ಕನ್ನಡ** ವಾಹಿನಿಯಲ್ಲಿ ಪ್ರಸಾರವಾಗುವ **ನೃತ್ಯ ಕಾರ್ಯಕ್ರಮ**ದಲ್ಲಿ ಭಾಗವಹಿಸಲು ಆಯ್ಕೆಯಾಗಿದ್ದೀರಿ, ತರಬೇತಿಗಾಗಿ ಮೂರುದಿನ ಮುಂಚೆಯೇ ಬೆಂಗಳೂರಿಗೆ ಹೋಗಬೇಕಾಗಿರುವುದರಿಂದ ನಾಲ್ಕುದಿನ ಶಾಲೆಗೆ ಹಾಜರಾಗಲು ಸಾಧ್ಯವಿಲ್ಲವೆಂದು ತಿಳಿಸಿ, ಇದಕ್ಕಾಗಿ ಅನುಮತಿ ಕೋರುತ್ತಾ, ನಿಮ್ಮ ಶಾಲೆಯ ಪ್ರಾಂಶುಪಾಲರಿಗೊಂದು ಪತ್ರ ಬರೆಯಿರಿ.

   ಉ: **ವ್ಯಾವಹಾರಿಕ ಪತ್ರ:**

   ಸ್ವ ವಿಳಾಸ: ½ — ಪತ್ರದ ಒಡಲು– ವಿಷಯ ವಿವರಣೆ: 2
   ದಿನಾಂಕ: ½ — ಭಾಷೆ: 1
   ಹೊರವಿಳಾಸ: ½ — ಧನ್ಯವಾದಗಳು: ½
   ಸಂಭೋದನೆ: ½ — ಮುಕ್ತಾಯ: ½
   ವಿಷಯ: ½ — ಹೊರವಿಳಾಸ: ½

**Questions 3:**

**Read the following passage carefully and answer in kannada the questions that follow:**

**ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ, ಅನಂತರ ಕೇಳಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ:** **[10]**

**1. ವಿಶುವಿನ ಮೇಲೆ ಮನೆಯ ಜವಾಬ್ದಾರಿ ಬೀಳಲು ಕಾರಣವೇನು?**

ಮಾಧ್ಯಮಿಕ ಶಾಲೆಯಲ್ಲಿ ಓದು ಮುಗಿಸಿ ಅಲ್ಲಿಯೇ ಲೋಯರ್ ಸೆಕೆಂಡರಿ ಪರೀಕ್ಷೆ ಹಾಗೂ ಪ್ರೌಢಶಾಲೆಯ ವ್ಯಾಸಂಗವನ್ನು ಮುಗಿಸುತ್ತಿದ್ದ ಸಂದರ್ಭದಲ್ಲಿ ಯಾತ್ರೆಗೆ ಹೋಗಿದ್ದ ತಂದೆ ಅಕಾಲಿಕ ಮರಣಕ್ಕೆ ತುತ್ತಾದರು. ಆದ್ದರಿಂದ ಮನೆಯ ಪೂರ್ಣ ಜವಾಬ್ದಾರಿ ವಿಶುವಿನ ಮೇಲೆ ಬಿತ್ತು.

**2. ವಿಶು ತನ್ನ ಮೆಟ್ರಿಕ್ ಪರೀಕ್ಷೆಗೆ ಶುಲ್ಕ ಕಟ್ಟಲು ಪಟ್ಟ ಶ್ರಮವೇನು ?**

ವಿಶುವಿಗೆ ಹೈಸ್ಕೂಲ್ ಅಂತಿಮ ವರ್ಷದ ಮೆಟ್ರಿಕ್ ಪರೀಕ್ಷೆಗೆ ಶುಲ್ಕವನ್ನು ತುಂಬಲು ಹಣವಿರಲಿಲ್ಲ. ಬೆಂಗಳೂರಿನಿಂದ ೫೫ ಕಿ.ಮೀ. ದೂರದ ಚಿಕ್ಕಬಳ್ಳಾಪುರಕ್ಕೆ ನಡೆದುಕೊಂಡೇ ಹೋದನು. ಈ ವಿಶಯ ತಿಳಿದ ತಾಯಿ ವೆಂಕಟಲಕ್ಷ್ಮಮ್ಮನವರು ಮನೆಯಲ್ಲಿದ್ದ ಪಾತ್ರೆಗಳನ್ನು ವ್ಯಾಪಾರಿಯೊಬ್ಬರ ಬಳಿ ಅಡವಿಟ್ಟು ೧೨ ರೂಪಾಯಿಗಳನ್ನು ಮಗನಿಗೆ ಕೊಟ್ಟರು. ಆ ಹಣವನ್ನು ತೆಗೆದುಕೊಂಡು ಹಗಲು ಮೂಡುವ ಮುನ್ನವೇ ಮತ್ತೆ ಬೆಂಗಳೂರಿನತ್ತ ಪ್ರಯಾಣ ಬೆಳೆಸಿದ. ಶಾಲೆ ತಲುಪುವಷ್ಟರಲ್ಲಿ ಸಮಯ ಮೀರಿತ್ತು. ಪರೀಕ್ಷಾ ಶುಲ್ಕವನ್ನು ತೆಗೆದುಕೊಳ್ಳಲು ಗುಮಾಸ್ತ ನಿರಾಕರಿಸಿದನು. ಮೇಲಧಿಕಾರಿಗಳಲ್ಲಿ ವಾಸ್ತವಾಂಶವನ್ನು ನಿವೇದಿಸಿಕೊಂಡು ಅವರ ಶಿಫಾರಸ್ಸಿನಿಂದ ಪರೀಕ್ಷಾ ಶುಲ್ಕವನ್ನು ಕಟ್ಟಿದನು.

**3. ವಿಶ್ವೇಶ್ವರಯ್ಯನವರು ಜಗತ್ತಿಗೆ ಕರ್ಮ ಮಂತ್ರಗಳನ್ನು ಹೇಗೆ ಹೇಳಿಕೊಟ್ಟರು?**

ದೀಪದ ಬತ್ತಿ ತಾನು ಉರಿದು ಜಗತ್ತಿಗೆ ಬೆಳಕು ಕೊಡುವಂತೆ, ಗಂಧ ತಾನು ಸವೆದು ಸುತ್ತಲೂ ಸುಗಂಧ ಪಸರಿಸುವಂತೆ ಮುಗ್ಧ ಬಾಲಕ ವಿಶು ಬೆಳೆದು, ಭವಿಷ್ಯದಲ್ಲಿ ಅನ್ಯರು ಮೂರು ಜನ್ಮಗಳಲ್ಲಿ ಸಾಧಿಸಲಾಗದಿದ್ದುದನ್ನು ಒಂದೇ ಜನ್ಮದಲ್ಲಿ ಮಾಡಿ ತೋರಿಸಿದರು. 'ದುಡಿ ಇಲ್ಲವೇ ಮಡಿ' ಮತ್ತು 'ಕೈಗಾರೀಕರಣ ಇಲ್ಲವೇ ವಿನಾಶ' ಎಂಬ ಕರ್ಮ ಮಂತ್ರಗಳನ್ನು ಜಗತ್ತಿಗೆ ಹೇಳಿ ಕೊಟ್ಟರು.

**4. ವಿಶ್ವೇಶ್ವರಯ್ಯನವರು ಮೈಸೂರಿನ ದಿವಾನರಾಗಿದ್ದಾಗ ಕೈಗೊಂಡ ಸಾಧನೆಗಳೇನು ?**

ವೈಯಕ್ತಿಕ ಬುದ್ಧಿವಂತಿಕೆ, ಸತತ ಪರಿಶ್ರಮ, ಶಿಸ್ತು, ಕಾರ್ಯಕ್ಷಮತೆಗಳಿಂದ ವಿಶ್ವೇಶ್ವರಯ್ಯನವರು ಮೈಸೂರು ಸಂಸ್ಥಾನದ ದಿವಾನರಾದರು. ಕನ್ನಂಬಾಡಿ ಕಟ್ಟೆ, ಭದ್ರಾವತಿಯ ಕಬ್ಬಿಣ ಕಾರ್ಖಾನೆ, ಮೈಸೂರು ಕಾಗದ ಕಾರ್ಖಾನೆ, ಜೋಗ ಜಲವಿದ್ಯುತ್ ಸ್ಥಾವರ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್, ಮೈಸೂರು ವಿಶ್ವ ವಿದ್ಯಾಲಯ, ಕನ್ನಡ ಸಾಹಿತ್ಯ ಪರಿಷತ್ತುಗಳ ಸ್ಥಾಪನೆ, ಸಾರ್ವಜನಿಕ ಪುಸ್ತಕ ಭಂಡಾರ, ರೈಲ್ವೆ ಯೋಜನೆ ಭಟ್ಕಳ ಬಂದರು ಯೋಜನೆ, ವಿಮಾನ ಕಾರ್ಖಾನೆ, ಗಂಗಾ ಯೋಜನೆ, ತುಂಗಭದ್ರಾ ಅಣೆಕಟ್ಟು ಯೋಜನೆ....... ಒಂದೇ ಎರಡೇ, ಇವರ ಸಾಧನೆಗಳಿಗೆ ಲೆಕ್ಕವಿಲ್ಲ.

**5. ವಿಶ್ವೇಶ್ವರಯ್ಯನವರಿಗೆ ಲಭಿಸಿದ ಪದವಿ, ಪ್ರಶಸ್ತಿಗಳನ್ನು ಕುರಿತು ಬರೆಯಿರಿ.**

ಇವರಿಗೆ ಸಂದ ಪ್ರಶಸ್ತಿಗಳು ನೂರಾರು. ಹಲವು ವಿಶ್ವ ವಿದ್ಯಾಲಯಗಳು ನೀಡಿದ ಗೌರವ ಡಾಕ್ಟರೇಟುಗಳು, ಲಂಡನ್ನಿನಲ್ಲಿ ರೋಲ್ ಆಫ್ ಕೌನ್ಸಿಲ್ ಗೌರವ, ಬ್ರಿಟಿಷ್ ಸರ್ಕಾರದಿಂದ 'ಸರ್' ಪದವಿ, ಬಂಗಾಳದ ರಾಯಲ್ ಏಷ್ಯಾಟಿಕ್ ಸೊಸೈಟಿಯಿಂದ 'ದುರ್ಗಾಪ್ರಸಾದ್ ಖೈತಾನ್' 'ಸುವರ್ಣ ಪದಕ', ಇವೆಲ್ಲವಕ್ಕೂ ಕಿರೀಟ ಪ್ರಾಯವಾಗಿ ಭಾರತ ಸರ್ಕಾರದ 'ಭಾರತ ರತ್ನ' ಗೌರವ ಪ್ರದಾನ ಮಾಡಿತು.

## Questions 4:

**ಕೊಟ್ಟಿರುವ ನಾಲ್ಕು ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.** **[8]**

1. **'**ಸುದೈವ' – ಈ ಪದದ ವಿರುದ್ಧ ಪದ.

   ಅ) ದುರ್ದೈವ

2. 'ನರ್ತಕಿ' – ಈ ಪದದ ಬಹುವಚನ ರೂಪ.

   ಇ) ನರ್ತಕಿಯರು

3. ಸೂಕ್ತ ವಿಭಕ್ತಿ ಪ್ರತ್ಯಯಗಳನ್ನು ಆರಿಸಿ ವಾಕ್ಯವನ್ನು ಪೂರ್ಣಗೊಳಿಸಿ.
   ಗಿರೀಶ___ಶಾಲೆ___ಹೊರಗೆ ಕಳುಹಿಸಿದರು.

   ಅ) ನನ್ನು, ಯಿಂದ

4. ತಂದೆ ಮಗಳು ಮೌನವಾಗಿ, ನಿಧಾನವಾಗಿ <u>ಸಾಗಿದರು</u> _ ಈ ಪದದಲ್ಲಿ ಅಡಿಗೆರೆ ಎಳೆದ ಪದವನ್ನು ಭವಿಷ್ಯತ್ ಕಾಲಕ್ಕೆ ಬದಲಿಸಿದಾಗ ____ ಎಂದಾಗುತ್ತದೆ.

   ಈ) ಸಾಗುವರು.

5. 'ಉಪನ್ಯಾಸ' ಪದದ ಸಮಾನಾರ್ಥಕ ಪದ___

   ಅ) ಭಾಷಣ

6. 'ಸನ್ಯಾಸಿ' _ಈ ಪದದ ಅನ್ಯ ಲಿಂಗ ರೂಪ.

   ಆ) ಸನ್ಯಾಸಿನಿ

7. 'ಬಡವನಕೋಪ ______ ಈ ಗಾದೆ ಮಾತನ್ನು ಪೂರ್ಣಗೊಳಿಸಿ.

   ಈ) ದವಡೆಗೆ ಮೂಲ

8. ಸರಿಯಾದ ವಾಕ್ಯವನ್ನು ಗುರುತಿಸಿ.

   ಈ) ಮರದ ಮೇಲೆ ಕೋಗಿಲೆಯು ಕುಳಿತಿತ್ತು.

## SECTION –B (40 Marks )

Questions from only two of the following textbooks are to be answered.
Attempt four questions from this section.
You must answer at least one question from each of the two books you have studied and any two other questions from the books that you have chosen**.**

### ಸಾಹಿತ್ಯ ಸಂಗಮ – ಸಣ್ಣ ಕಥೆಗಳು

### SAHITYA SANGAMA – SHORT STORIES

## Question 5

Read the extract given below and answer in **Kannada** the questions that follow :-
**ಕೆಳಗೆ ಕೊಟ್ಟಿರುವ ಗಧ್ಯ ಭಾಗವನ್ನು ಓದಿ, ಅನಂತರ ಕೇಳಲಾದ ಪ್ರಶ್ನೆಗಳಿಗೆ ಕನ್ನಡದಲ್ಲಿ ಉತ್ತರಿಸಿ.**

**ಒಂದು ದಿನ ಅವರಿಗೆ ಬೇರೇನೂ ದೊರೆಯದಿದ್ದಾಗ ಮರದ ಬುಡದಲ್ಲಿ ಬಿದ್ದಿದ್ದ ಸತ್ತ ಹಾವನ್ನು ಎತ್ತಿಕೊಂಡು ಬಂದರು. ಸುಮಂಗಳ ಆ ಸತ್ತ ಹಾವನ್ನು ತನ್ನ ಗುಡಿಸಲಿನ ಮೇಲೆ ಎಸೆದಳು....**

**[ದೀಪಾವಳಿಯ ಮಹಿಮೆ]**

1. **ಪ್ರತಾಪನ ರಾಜ್ಯಕ್ಕೆ ಯಾರು ಬಂದರು? ಅವರಿಗೆ ಸಂತೋಷವಾಗಲು ಕಾರಣವೇನು?** **[2]**

   ಪ್ರತಾಪನ ರಾಜ್ಯಕ್ಕೆ ಕಾಶ್ಮೀರದಿಂದ ಕೇಸರಿ ಮಾರುವ ವ್ಯಾಪಾರಿಗಳು ಬಂದಿದ್ದರು. ಅವರು ತಂದಿದ್ದ ಭಾರೀ ಮೊತ್ತದ ಬೆಲೆ ಬಾಳುವ ಕೇಸರಿಯನ್ನು ಪ್ರತಾಪನು ವ್ಯಾಪಾರಿಗಳೆದುರು ತಾನೆಷ್ಟು ಶ್ರೀಮಂತ ಎಂದು

ತೋರಿಸಿಕೊಳ್ಳುವ ಆಸೆಯಿಂದ ಅವರ ಬಳಿಯಿದ್ದ ಎಲ್ಲಾ ಕೇಸರಿಯನ್ನು ಖರೀದಿಸಿದನು. ಇದರಿಂದ ವ್ಯಾಪಾರಿಗಳಿಗೆ ಸಂತೋಷವಾಯಿತು.

2. **ಲಕ್ಷ್ಮಿ ದೇವತೆ ಪ್ರತಾಪನ ಸೊಕ್ಕನ್ನು ಇಳಿಸಲು ಏನು ಮಾಡಿದಳು?** **[2]**

ಪ್ರತಾಪನು ಬೆಲೆಬಾಳುವ ಕೇಸರಿಯನ್ನು ಗೊಬ್ಬರದ ಗುಂಡಿಗೆ ಸುರಿಸಿದುದರಿಂದ ಧನ ಮತ್ತು ಸಮೃದ್ಧಿಯ ದೇವತೆ ಲಕ್ಷ್ಮೀದೇವಿಗೆ ಅವಮಾನವಾಯಿತು. ತನ್ನ ಕೃಪೆಯಿಂದ ಶ್ರೀಮಂತನಾಗಿ ಮೆರೆಯುತ್ತಿರುವ ಪ್ರತಾಪನಿಗೆ ಬುದ್ಧಿ ಕಲಿಸಿ ಅವನ ಸೊಕ್ಕನ್ನು ಇಳಿಸಲು ನಿರ್ಧರಿಸಿದಳು. ಅದರ ಪರಿಣಾಮವಾಗಿ ಪ್ರತಾಪ ಕೆಲವೇ ದಿನಗಳಲ್ಲಿ ಜೂಜಾಡಲು ಕಲಿತು ತನ್ನೆಲ್ಲಾ ಸಂಪತ್ತನ್ನು ಜೂಜಿನಲ್ಲಿ ಕಳೆದುಕೊಂಡು ನಿರ್ಗತಿಕನಾದನು.ಚಿನಾರಿ ರಾಜ್ಯದ ಮೇಲೆ ಶತ್ರುಗಳು ಆಕ್ರಮಣ ಮಾಡಿದಾಗ ಅವರನ್ನು ಎದುರಿಸಲಾಗದೆ ಸೋತು ರಾಜ್ಯ ಕಳೆದುಕೊಂಡನು. ಅದೇ ರಾತ್ರಿ ಪ್ರತಾಪ ತನ್ನ ಮಗ ಮತ್ತು ಸೊಸೆಯೊಂದಿಗೆ ರಾಜ್ಯ ಬಿಟ್ಟು ಹೊರಟನು. ಹೀಗೆ ಲಕ್ಷ್ಮೀ ದೇವಿ ಪ್ರತಾಪನ ಸೊಕ್ಕನ್ನು ಇಳಿಸಿದಳು.

3. **ಸುಮಂಗಳೆ ರಾಜನ ಅರಮನೆಗೆ ಹೋಗಲು ಕಾರಣವೇನು? ಅವಳು ರಾಜನ ಬಳಿ ಯಾವ ಕೋರಿಕೆಯನ್ನಿಟ್ಟಳು?** **[3]**

ಸುಮಂಗಳೆ ತನ್ನ ಮಾವ ಮತ್ತು ಗಂಡನೊಡನೆ ತನಗೆ ಸಿಕ್ಕಿದ್ದ ವಜ್ರದ ಹಾರವನ್ನು ರಾಜನಿಗೆ ಕೊಡಲು ಅರಮನೆಗೆ ಹೋದಳು. ವಜ್ರದ ಹಾರವನ್ನು ಕಂಡ ರ್ರಾಜನಿಗೆ ಬಹಳ ಸಂತೋಷವಾಗಿ "ನಿನಗೇನು ಬೇಕು ಸಂಕೋಚಪಡದೆ ಕೇಳು, ಖಂಡಿತ ಕೊಡೂತ್ತೇನೆ" ಎಂದನು.

ಅದಕ್ಕೆ ಸುಮಂಗಳ, "ಪ್ರಭು, ನನಗೆ ಧನಕನಕ ವಸ್ತು ವಾಹನಾದಿಗಳೇನೂ ಬೇಡ, ದೀಪಾವಳಿ ಹಬ್ಬದ ದಿನ ರಾತ್ರಿ ಇಡೀ ರಾಜ್ಯದಲ್ಲಿ ಅರಮನೆಯೂ ಸೇರಿದಂತೆ ಯಾವ ಮನೆಯಲ್ಲೂ ದೀಪ ಹಚ್ಚಬಾರದು. ದೀಪಗಳನ್ನು ಬೆಳಗಿಸಬೇಕೆಂದಿರುವವರು ನನ್ನ ಗುಡಿಸಲಿನ ಸುತ್ತಲೂ ಬೆಳಗಿಸಲಿ" ಎಂದು ಕೋರಿದಳು.

4. **ಸುಮಂಗಳೆ ತನ್ನ ಗುಡಿಸಲಿನೊಳಗೆ ಬರದಂತೆ ಯಾರನ್ನು ತಡೆದಳು? ಅವರಿಬ್ಬರ ನಡುವೆ ನಡೆದ ಸಂಭಾಷಣೆಯನ್ನು ಬರೆಯಿರಿ.** **[3]**

ಸುಮಂಗಳೆ ತನ್ನ ಗುಡಿಸಲಿನೊಳಗಡೆ ಬರದಂತೆ ಲಕ್ಷ್ಮೀದೇವಿಯನ್ನು ತಡೆದಳು. ಸುಮಂಗಳೆ ಕೈಯಲ್ಲಿ ಕೋಲು ಹಿಡಿದು ಲಕ್ಷ್ಮೀದೇವಿಯನ್ನು ಬಾಗಿಲಿನಲ್ಲಿಯೇ ತಡೆದಾಗ ಲಕ್ಷ್ಮೀದೇವಿ "ನನ್ನನ್ನು ತಡೆಯಬೇಡ, ದಯಮಾಡಿ ಈ ರಾತ್ರಿ ತಂಗಲು ಅವಕಾಶ ಮಾಡಿಕೊಡು" ಎಂದು ಕೇಳಿದಳು. ಅದಕ್ಕೆ ಸುಮಂಗಳೆ "ಸಾಧ್ಯವಿಲ್ಲ, ನನ್ನ ತಂದೆ (ಮಾವ) ಮಾಡಿದ ಸಣ್ಣ ತಪ್ಪಿಗೆ ನೀನು ದೊಡ್ಡ ಶಿಕ್ಷೆ ನೀಡಿರುವೆ, ರಾಜ್ಯ, ಸಂಪತ್ತು ಎಲ್ಲಾ ಕಳೆದುಕೊಂಡು ನಾವು ನಿರ್ಗತಿಕ ಜೀವನ ನಡೆಸಬೇಕಾಗಿದೆ. ನೀನು ತುಂಬಾ ಕ್ರೂರಿ" ಎಂದು ಗುಡುಗಿದಳು. ಆಗ ಲಕ್ಷ್ಮೀದೇವಿ ಸುಮಂಗಳೆಯನ್ನು ಸಮಾಧಾನ ಮಾಡುತ್ತಾ "ಈ ರಾತ್ರಿ ದೀಪ ಬೆಳಗುತ್ತಿರುವ ಈ ಗುಡಿಸಲಿನಲ್ಲಿ ತಂಗಲು ಅವಕಾಶ ಮಾಡಿಕೊಟ್ಟರೆ ಮತ್ತೆ ನಿನ್ನ ಮಾವ ಸಿರಿವಂತನಾಗುತ್ತಾನೆ, ಅವನ ರಾಜ್ಯ ಮತ್ತೆ ಲಭಿಸುತ್ತದೆ" ಎಂದು ಹೇಳಿದಳು.

## Question 6

**ಮನೆಯಲ್ಲಿದ್ದ ಸ್ಟೀಲ್ ಪಾತ್ರೆಗಳ ಬಗ್ಗೆ ಅಮ್ಮನಿಗೆ ಖಚಿತವಾದ ಲೆಕ್ಕವಿರುತ್ತಿತ್ತು.ಒಂದು ಪುಟ್ಟ ಚಮಚ ಕಾಣೆಯಾದರೂ ಸಾಕು ತಳಮಳಿಸಿಬಿಡುತ್ತಿದ್ದಳು.....[ಸ್ಟೇನ್ ಲೆಸ್' ಸ್ಟೀಲ್ ಪಾತ್ರೆಗಳು]**

**ಪ್ರಶ್ನೆಗಳು:**

1. **ಲೇಖಕ ವಸುಧೇಂದ್ರರವರನ್ನು ಪರಿಚಯಿಸಿ.** **[2]**

ವಸುಧೇಂದ್ರರವರು ೧೯೬೯ ರಲ್ಲಿ, ಬಳ್ಳಾರಿ ಜಿಲ್ಲೆಯ ಸಂಡೂರಿನಲ್ಲಿ ಜನಿಸಿದರು. ಸಂಡೂರಿನಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿ ಎನ್.ಐ.ಟಿ.ಕೆ. ಸೂರತ್ಕಲ್ ನಲ್ಲಿ ಬಿ.ಇ. ಪದವಿ ಹಾಗೂ ಐ.ಐ.ಎಸ್.ಸಿ. ಬೆಂಗಳೂರಿನಿಂದ

ಎಮ್.ಇ. ಪದವಿ ಪಡೆದಿದ್ದಾರೆ. ಚಾರಣದಲ್ಲಿ ಹೆಚ್ಚು ಆಸಕ್ತಿಹೊಂದಿರುವ ಇವರು ೨೦ ವರ್ಷ ಸಾಫ್ಟ್ ವೇರ್ ಕಂಪನಿಯಲ್ಲಿಯೂ ಕೆಲಸ ನಿರ್ವಹಿಸಿದ್ದಾರೆ. ನಮ್ಮಮ್ಮ ಅಂದ್ರೆ ನಂಗಿಷ್ಟ, ಯುಗಾದಿ, ಇ–ಕಾಮರ್ಸ್, ಮನೀಷೆ, ಕೋತಿಗಳು ಸಾರ್ ಕೋತಿಗಳು ಇನ್ನೂ ಮುಂತಾದ ಕೃತಿಗಳನ್ನು ರಚಿಸಿರುವ ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡಮಿಯ ಪುಸ್ತಕ ಬಹುಮಾನ, ದ.ರಾ.ಬೇಂದ್ರೆ ಕಥಾ ಪ್ರಶಸ್ತಿ, ಯು.ಆರ್. ಅನಂತಮೂರ್ತಿ ಪ್ರಶಸ್ತಿ, ಬೆಸಗರಹಳ್ಳಿ ರಾಮಣ್ಣ ಪ್ರಶಸ್ತಿ, ಸೇಡಂ ನ 'ಅಮ್ಮ' ಪ್ರಶಸ್ತಿ, ಕಥಾ ರಂಗಂ ಪ್ರಶಸ್ತಿಗಳು ಲಭಿಸಿವೆ.

**2. ಲೇಖಕರ ಮನೆಗೆ ಮೊದಲ ಸ್ಟೀಲ್ ಪಾತ್ರೆ ಪ್ರವೇಶಿಸಿದ ಸಂದರ್ಭವನ್ನು ವಿವರಿಸಿ. [2]**

ಬಸುರಿಯಾಗಿದ್ದ ಲೇಖಕರ ತಾಯಿ ತಿಂದದ್ದನ್ನೆಲ್ಲಾ ವಾಂತಿ ಮಾಡುತ್ತಿದ್ದಳು. ಲೇಖಕರ ತಂದೆ ಅವಳ ಬಳಿ ಬಂದು ಪ್ರೀತಿಯಿಂದ ಏನು ಬೇಕೆಂದು ಕೇಳಿದಾಗ " ಊಟಕ್ಕೆ ಒಂದು ಸ್ಟೀಲ್ ತಟ್ಟೇ ತೆಗೆದುಕೊಂಡು ಬನ್ನಿ" ಎಂದು ತನ್ನ ಬಯಕೆ ವ್ಯಕ್ತಪಡಿಸಿದಳು. ಬಸುರಿಯ ಬಯಕೆ ಈಡೇರಿಸದಿದ್ದರೆ ಹುಟ್ಟುವ ಮಗುವಿಗೆ ಮಾತೇ ಬರುವುದಿಲ್ಲ ಎಂಬ ಭಯದಿಂದ ಅಪ್ಪ ಸಾಲ ಸೋಲ ಮಾಡಿ ಒಂದು ಸ್ಟೀಲ್ ತಟ್ಟೆ ತಂದರು. ಆ ತಟ್ಟೆಯಲ್ಲಿ ಚಟ್ನಿ, ಪಲ್ಯ, ಉಪ್ಪು, ಹುಳಿ ಹಾಕಿಕೊಳ್ಳಲು ಮುಂಭಾಗದಲ್ಲಿ ಕುಣಿಗಳಿದ್ದು ನೋಡಲು ಲೇಪಾಕ್ಷಿಯಲ್ಲಿರುವ ಕಲ್ಲಿನ ತಟ್ಟೆಯ ಹಾಗಿತ್ತು. ಹೀಗೆ ಲೇಖಕರ ಮನೆಗೆ ಮೊದಲ ಸ್ಟೀಲ್ ತಟ್ಟೇ ಪ್ರವೇಶ ಪಡೆಯಿತು.

**3. ದಪ್ಪ ಮುಚ್ಚುಳದ ಡಬ್ಬಗಳನ್ನು ಲೇಖಕರ ಅಮ್ಮ ಎಲ್ಲಿಂದ ಮತ್ತು ಏಕೆ ತಂದಿದ್ದರು? ಅವುಗಳನ್ನು ಪದ್ದಕ್ಕನಿಗೆ ಮಾರಲು ಕಾರಣವೇನು? [3]**

ದಪ್ಪ ಮುಚ್ಚುಳದ ಡಬ್ಬಗಳನ್ನು ಲೇಖಕರ ಅಮ್ಮ ಬಳ್ಳಾರಿ ಅಂಗಡಿಯಿಂದ ಉದ್ರಿ ಬರೆಸಿ ಕಾಫಿ ಪುಡಿ ಮತ್ತು ಸಕ್ಕರೆ ಹಾಕಿಕೊಳ್ಳಲೆಂದು ತಂದಳು. ಆದರೆ ಎಷ್ಟೇ ಗೋಗರೆದರೂ ಅಪ್ಪ ಆ ಡಬ್ಬಗಳನ್ನು ಕೊಳ್ಳಲು ಒಪ್ಪಲಿಲ್ಲ. ಅಂಗಡಿಯವನು ಅವುಗಳನ್ನು ಹಿಂದೆ ತೆಗೆದುಕೊಳ್ಳಲು ನಿರಾಕರಿಸಿದನು. ಆದ್ದರಿಂದ ಅಮ್ಮ ಮತ್ತು ಲೇಖಕರು ಆ ಎರಡೂ ಡಬ್ಬಗಳನ್ನು ಹಿಡಿದುಕೊಂಡು ಊರಲ್ಲಿ ಪರಿಚಯ ಇದ್ದವರ ಮನೆಗಳಿಗೆಲ್ಲಾ ಅಲೆದು ಮಾರಲು ಪ್ರಯತ್ನಿಸಿದರು. ಕೊನೆಗೆ ಪದ್ದಕ್ಕ ಎರಡು ರೂಪಾಯಿ ಕಡಿಮೆಗೆ ಅವುಗಳನ್ನು ಕೊಂಡರು.

**4. ವೇಣು ಯಾರು? ಅವನು ಲೇಖಕರ ಮನೆಯಲ್ಲಿ ಕಹಿ ಮುಖ ಮಾಡಿಕೊಂಡು ಕಾಫಿ ಕುಡಿಯಲು ಕಾರಣವೇನು? [3]**

ವೇಣು ಲೇಖಕರ ಚಿಕ್ಕಪ್ಪನ ಮಗ.

ಲೇಖಕರು ಬಂಧು–ಬಳಗದವರ ಜೊತೆ ತಿರುಪತಿಗೆ ಹೊರಟರು. ಅವರ ಅಮ್ಮ ಚಿತ್ರಾನ್ನ, ಮೊಸರನ್ನ ಮಾಡಿಕೊಂಡು ಬಂದಿದ್ದರು. ರೈಲಿನಲ್ಲಿ ಎಲ್ಲರೂ ಊಟ ಮಾಡಿದ ನಂತರ ಪಾತ್ರೆಗಳನ್ನೆಲ್ಲಾ ಒಂದು ಪ್ಲಾಸ್ಟಿಕ್ ಬಕೆಟ್ ನೀರಿನಲ್ಲಿ ತೊಳೆದು ವೇಣು ನೀರನ್ನು ರೈಲಿನ ಬಾಗಿಲಿನ ಮೂಲಕ ಹೊರಗೆ ಚೆಲ್ಲಿದಾಗ 'ಠಣ್' ಎಂಬ ಶಬ್ದ ಬಂತು. ಲೇಖಕರ ನಾಮಕರಣದಲ್ಲಿ ಉಡುಗೊರೆಯಾಗಿ ಬಂದಿದ್ದ ಎರಡು ಲೋಟಗಳಲ್ಲಿ ಒಂದು ಲೋಟ ಹೊರಗೆ ಬಿತ್ತೆಂದು ತಿಳಿದ ಅಮ್ಮ ಆರ್ಭಟಿಸಿ ರೈಲು ನಿಲ್ಲಿಸಲು ಚೈನನ್ನು ಎಳೆಯಲು ಪ್ರಯತ್ನಿಸಿ, ಅಪ್ಪ ಬೈದಾಗ ಸುಮ್ಮನಾದರು. ತಿರುಪತಿಯಿಂದ ಹಿಂದಿರುಗುವಾಗ ಅಮ್ಮ ಕಿಟಕಿ ಪಕ್ಕದಲ್ಲೇ ಕುಳಿತು ಲೋಟ ಕಾಣಿಸುವುದೇನೋ, ಆಗ ಯಾವುದೋ ಕಾರಣಕ್ಕೆ ರೈಲು ನಿಲ್ಲುವುದೇನೋ ಎಂದು ನಿರೀಕ್ಷಿಸುತ್ತಿದ್ದಳು. ಮುಂದೆ ವೇಣು ಮನೆಗೆ ಬಂದಾಗಲೆಲ್ಲಾ ಒಂದು ಲೋಟದಲ್ಲಿ ಕಾಫಿ ಕೊಟ್ಟು, "ಇನ್ನೊಂದು ಲೋಟವನ್ನು ನೀನೇ ಕಳೆದುಬಿಟ್ಟೆ" ಎಂದಾಗ ವೇಣು ಕಹಿ ಮುಖ ಮಾಡಿಕೊಂಡು ಕಾಫಿ ಕುಡಿಯುತ್ತಿದ್ದ.

## Question 7

**ಗಾಂಧೀಜಿಯವರು ಮೈಸೂರು ಸಂಸ್ಥಾನಕ್ಕೆ ಬಂದಿರುವ ಸುದ್ದಿ ತಿಳಿದ ಲಿಂಗಣ್ಣನವರು ಗಾಂಧೀಜಿಯವರಿಗೆ ಪರಿಚಯವಿದ್ದ ಮತ್ತು ತಮ್ಮ ಕಾನೂನು ಸಲಹೆಗಾರರಾದ ಕಲ್ಲೂರು ಸುಬ್ಬರಾಯರ ಮೂಲಕ ಗಾಂಧೀಜಿಯವರನ್ನು ಭೇಟಿ ಮಾಡಲು ನಂದಿಬೆಟ್ಟಕ್ಕೆ ಬಂದಿದ್ದರು...... [ಸೇವಾಶ್ರಮದ ಲಿಂಗಣ್ಣ]**

**1. ಗಾಂಧೀಜಿಯವರು ಸಮಯಕ್ಕೆ ನೀಡುತ್ತಿದ್ದ ಮಹತ್ವವೇನು? [2]**

ಗಾಂಧೀಜಿಯವರು ಸಮಯದ ಬಗೆಗೆ ತುಂಬಾ ಖಚಿತವಾಗಿರುತ್ತಿದ್ದರು. ಒಬ್ಬರಿಗೆ ಭೇಟಿಯ ಸಮಯವನ್ನು ಐದು ನಿಮಿಷ ಕೊಟ್ಟಿದ್ದರೆ, ಐದು ನಿಮಿಷಕ್ಕೆ ಮಾತು ಮುಗಿಸುತ್ತಿದ್ದರು. ಆರನೇ ನಿಮಿಷ ಅಲ್ಲಿ ಯಾರಾದರೂ ಕುಳಿತಿದ್ದರೆ ಅವರೊಡನೆ ಒಂದು ಮಾತನ್ನೂ ಆಡುತ್ತಿರಲಿಲ್ಲ. ತಮ್ಮ ಪಾಡಿಗೆ ತಾವು ನೂಲು ತೆಗೆಯುತ್ತಾ ಕುಳಿತು ಬಿಡುತ್ತಿದ್ದರು.

**2. ಲಿಂಗಣ್ಣ ಯಾರು? ಅವರ ಪರಿಚಯ ಮಾಡಿಕೊಡಿ. [2]**

ಲಿಂಗಣ್ಣ ಶಿರಾ ತಾಲ್ಲೂಕಿನ ಪಟ್ಟನಾಯಕನ ಹಳ್ಳಿ ಬಳಿಯ ಕಾಮಗಾನ ಹಳ್ಳಿಯವರು. ಹಿಂದೂಪುರಕ್ಕೆ ಹೋಗಿ ಕಂಬಳಿ ನೇಯುವ ಕಾರ್ಖಾನೆ ಸ್ಥಾಪಿಸಿದರು. ಅವರು ಹೆಚ್ಚು ಕಲಿತವರಲ್ಲ. ಪ್ರಾಥಮಿಕ ಶಾಲೆಯ ವರೆಗೆ ಓದಿದ್ದರು. ಅವರ ಹೆಂಡತಿ ಚೌಡಮ್ಮ. ಅವರಿಗೆ ಮಕ್ಕಳಿರಲಿಲ್ಲ. ಆದ್ದರಿಂದ ತಿಪ್ಪೇಸ್ವಾಮಿ ಎಂಬ ಬಾಲಕನನ್ನು ದತ್ತು ಪಡೆದಿದ್ದರು. ಲಿಂಗಣ್ಣನವರು ಕೈಮಗ್ಗದಿಂದ ಮಾತ್ರವಲ್ಲದೆ ಯಂತ್ರಗಳಿಂದಲೂ ನೇಯ್ಗೆ ಮಾಡುತ್ತಿದ್ದರು. ಅವರ ವ್ಯಾಪಾರವು ಮದ್ರಾಸು, ಮುಂಬೈಗಳಲ್ಲದೆ ಸಿಂಗಪೂರ್, ಸಿಲೋನ್ ದೇಶಗಳಿಗೂ ಹರಡಿತ್ತು, ನೂರಾರು ಕುಟುಂಬಗಳಿಗೆ ಕೆಲಸ ನೀಡಿದ್ದರು.

**3. ಲಿಂಗಣ್ಣನವರು ಗಾಂಧೀಜಿಯವರನ್ನು ಯಾರೊಡನೆ ಭೇಟಿಯಾದರು? ಅಲ್ಲಿ ನಡೆದ ಮಾತುಕತೆಯನ್ನು ವಿವರಿಸಿ. [3]**

ಲಿಂಗಣ್ಣನವರು ಗಾಂಧೀಜಿಯವರನ್ನು ತಮ್ಮ ಕಾನೂನು ಸಲಹೆಗಾರರಾದ ಕಲ್ಲೂರು ಸುಬ್ಬರಾಯರ ಜೊತೆ ಭೇಟಿ ಮಾಡಿದರು.

ನಂದಿಬೆಟ್ಟದಲ್ಲಿ ಗಾಂಧೀಜಿಯವರನ್ನು ಭೇಟಿ ಮಾಡಿದಾಗ, ಲಿಂಗಣ್ಣನವರಿಗೆ ಇಂಗ್ಲೀಷ್ ಮತ್ತು ಹಿಂದಿ ಎರಡೂ ಭಾಷೆಗಳು ಬರದಿದ್ದ ಕಾರಣ ಸುಬ್ಬರಾಯರೇ ಲಿಂಗಣ್ಣನವರ ಅಭಿಪ್ರಾಯಗಳನ್ನು ತಿಳಿಸಿದರು. ಲಿಂಗಣ್ಣನವರು ಗ್ರಾಮ ಕೈಗಾರಿಕೆಗಳಿಗೆ ಒತ್ತು ಕೊಡುತ್ತಾರೆಂದು ಗಾಂಧೀಜಿ ಮೆಚ್ಚುಗೆಯನ್ನು ಸೂಚಿಸುತ್ತಾ, "ದೆನ್ ಹಿ ಈಸ್ ಎ ಬಿಗ್ ಶಾಟ್"ಎಂದರು ನಗುತ್ತಾ. ನಂತರ ಗಾಂಧೀಜಿ ಅವರು ನಮಗೇನು ಕೊಡುತ್ತಾರೆ? ಎಂದು ಹಿಂದಿಯಲ್ಲಿ ಕೇಳಿದರು. ಈ ಎಲ್ಲಾ ಮಾತುಗಳನ್ನು ಸುಬ್ಬರಾಯರು ಅನುವಾದ ಮಾಡಿ ಲಿಂಗಣ್ಣನವರಿಗೆ ಹೇಳಿದಾಗ, ತಕ್ಷಣ ಲಿಂಗಣ್ಣನವರ ಮುಖದಲ್ಲಿಮಂದಹಾಸ ಮೂಡಿತು. ಒಂದು ಕ್ಷಣವೂ ಯೋಚಿಸದೆ "ಎಲ್ಲವೂ ಅವರದೇ, ನಾನು ಕೊಡುವುದೇನಿದೆ?" ಎಂದು ಹೇಳಿದ ಮಾತನ್ನು ಕೇಳಿ ಗಾಂಧೀಜಿ ನಗುತ್ತಾ, "ಅಚ್ಚೀ ಬಾತ್ ಹೈ" ಎಂದು ಉದ್ಗರಿಸಿದರು.

**4. ಲಿಂಗಣ್ಣನವರು ಸೇವಾಶ್ರಮವನ್ನು ಎಲ್ಲಿ ಸ್ಥಾಪಿಸಿದರು? ತನ್ನ ಸಂಪತ್ತನ್ನೆಲ್ಲಾ ತ್ಯಾಗ ಮಾಡಿದ ನಂತರ ಲಿಂಗಣ್ಣನವರು ಹೇಗೆ ಜೀವನ ನಡೆಸಿದರು? [3]**

ಗಾಂಧೀಜಿಯವರ ಸೂಚನೆಯ ಮೇರೆಗೆ ಲಿಂಗಣ್ಣನವರು ಪೆನ್ನಾರ್ ನದಿಯ ದಂಡೆಯ ಮೇಲೆ ಸೇವಾಶ್ರಮವನ್ನು ಸ್ಥಾಪಿಸಿದರು.

ಸೇವಾಶ್ರಮದ ಆಶ್ರಯದಲ್ಲಿ ಶಾಲೆಯೊಂದನ್ನು, ವಿದ್ಯಾರ್ಥಿಗಳಿಗಾಗಿ ಹಾಸ್ಟಲನ್ನೂ ಆರಂಭಿಸಿದರು. ತಮ್ಮ ಸಂಪತ್ತನ್ನೆಲ್ಲಾ ಸೇವಾಶ್ರಮಕ್ಕೆ ಅರ್ಪಿಸಿದ ಲಿಂಗಣ್ಣನವರು, ಅಲ್ಲಿಯೇ ತಿಂಗಳಿಗೆ ೩೦ ರೂಪಾಯಿ ಸಂಬಳಕ್ಕೆ ಕೆಲಸಕ್ಕೆ ಸೇರಿದರು. ಅವರು ಬದುಕಿರುವವರೆಗೂ ತಮ್ಮ ಸಂಬಳಕ್ಕಿಂತ ಒಂದು ಬಿಡಿಗಾಸನ್ನೂ ಹೆಚ್ಚಿಗೆ ತೆಗೆದುಕೊಳ್ಳಲಿಲ್ಲ. ಅವರು ಹಾಸ್ಟಲಿನಲ್ಲಿಯೇ ಊಟ ಮಾಡುತ್ತಿದ್ದರು. ಊಟದ ಖರ್ಚು ಕಳೆದು ತಮ್ಮ ಸಂಬಳ ತೆಗೆದುಕೊಳ್ಳುತ್ತಿದ್ದರು. ಒಮ್ಮೆ ಸೇವಾಶ್ರಮದ ಲೆಕ್ಕಾಚಾರದಲ್ಲಿ ನಾಲ್ಕಾಣೆ ಕಡಿಮೆಯಾಯಿತು. ಆಗ ಲಿಂಗಣ್ಣನವರು ಆ ದಿನದ ಊಟ ಬಿಟ್ಟು ಲೆಕ್ಕವನ್ನು ಸರಿದೂಗಿಸಿದರು. ಈ ರೀತಿ ಲಿಂಗಣ್ಣನವರು ಪ್ರಾಮಾಣಿಕವಾಗಿ ಜೀವನ ನಡೆಸಿದರು.

## Question 8

**ಓಲಗದಲಿರುತ್ತ ತೊಡೆಯ**
**ಮೇಲೆ ಮಕ್ಕಳಾಡುತಿರಲು**
**ಲೀಲೆಯಿಂದ ಚಾತುರಂಗ ಬಲವ ನೋಡುತ**
**ಲೋಲನಾಗಿ ನುಡಿದನಿನಿತು......** **[ತಿರುಕನ ಕನಸು–ಮುಪ್ಪಿನ ಷಡಕ್ಷರಿ]**

1. **ಪಟ್ಟವನ್ನು ಕಟ್ಟಿದ ಮೇಲೆ ತಿರುಕನು ಹೇಗೆ ರಾಜ್ಯವಾಳಿದನು? ವಿವರಿಸಿ.** **[2]**

ತಿರುಕನಿಗೆ ಪಟ್ಟವನ್ನು ಕಟ್ಟಿದ ಮೇಲೆ ಅಕ್ಕಪಕ್ಕದ ರಾಜರು ಅವರ ಕನ್ಯೆಯರನ್ನು ಕೊಟ್ಟು ಮದುವೆ ಮಾಡಿದರು. ಅವನ ಒಡ್ಡೋಲಗದಲ್ಲಿ ಭಟನಿಗಳನ್ನು ಕೂಡಿಕೊಂಡು ರಾಜ್ಯವಾಳುತ್ತಿರುವಾಗ ಅವನ ಮಕ್ಕಳು ತೊಡೆಯ ಮೇಲೆ ಆಡುತ್ತಿದ್ದರು. ತನ್ನ ಚತುರಂಗ ಬಲವನ್ನು ನೋಡುತ್ತಾ ಆನಂದಿಸುತ್ತಿದ್ದನು. ಮುಂದೆ ಕನಸಿನಲ್ಲಿಯೇ ಆ ಮಕ್ಕಳು ದೊಡ್ಡವರಾಗಲು, ಮಂತ್ರಿಗಳನ್ನು ಕರೆದು ಸೂಕ್ತ ಕನ್ಯೆಯರನ್ನು ಹುಡುಕಿ ಎನಲು ತಕ್ಷಣವೇ ಹುಡುಕಿ ಬಂದೆವು ಎಂದು ಹೇಳುತ್ತಿದ್ದರು. ಹೀಗೆ ಸುಖವಾಗಿ ದರ್ಪದಿಂದ ರಾಜ್ಯವಾಳುತ್ತಿದ್ದನು.

2. **"ಪೊಡವಿಯಾಣ್ಮನಾದೆನೆಂದು ಹಿಗ್ಗುತಿರ್ದನು"– ಸಂದರ್ಭದೊಡನೆ ವಿವರಿಸಿ.** **[2]**

ಈ ವಾಕ್ಯವನ್ನು ಮುಪ್ಪಿನ ಷಡಕ್ಷರಿಯವರು ಬರೆದಿರುವ 'ತಿರುಕನ ಕನಸು' ಪದ್ಯದಿಂದ ಆರಿಸಲಾಗಿದೆ.
ಈ ಮಾತನ್ನು ತಿರುಕನು ತನಗೆ ಹೇಳಿಕೊಂಡನು.

ಊರೆಲ್ಲಾ ಭಿಕ್ಷೆ ಬೇಡಿ ಬಂದ ತಿರುಕನು ಮುರುಕು ಧರ್ಮಶಾಲೆಯಲ್ಲಿ ಮಲಗಿದ್ದನು. ಆ ಊರಿನ ರಾಜ ಸತ್ತು ಹೋಗಿ ಮುಂದೆ ಪಟ್ಟವನ್ನು ಕಟ್ಟಲು ಅವನಿಗೆ ರಾಜಕುಮಾರರಿಲ್ಲದ ಕಾರಣ, ಊರಿನ ಹಿರಿಯರೆಲ್ಲರೂ ಆನೆಯ ಕೈಗೆ ಹೂವಿನ ಹಾರವನ್ನು ಕೊಟ್ಟು ಅದು ಯಾರ ಕೊರಳಲ್ಲಿ ಹಾಕುವುದೋ ಅವನನ್ನೇ ರಾಜನನ್ನಾಗಿ ಮಾಡುವುದಾಗಿ ತೀರ್ಮಾನಿಸಿದರು. ಆ ಆನೆಯು ಆ ಹಾರವನ್ನು ತಿರುಕನಿಗೆ ಹಾಕಲು ತಾನು ರಾಜನಾದೆನೆಂದು ಕನಸಿನಲ್ಲಿಯೇ ಹಿಗ್ಗುತ್ತಿದ್ದನು.

3. **ತಿರುಕನು ಕನಸಿನಲ್ಲಿ ಏಕೆ ಹಿಗ್ಗುತ್ತಿದ್ದನು? ಅವನು ಕನಸಿನಲ್ಲಿ ಹೆದರಿ ಕಣ್ಣು ಬಿಡಲು ಕಾರಣವೇನು?** **[3]**

ತಿರುಕನು ಕನಸಿನಲ್ಲಿ ತಾನು ಈ ಭೂಮಿಗೆ ರಾಜನಾದೆನೆಂದು ಹಿಗ್ಗುತ್ತಿದ್ದನು.
ಕನಸಿನಲ್ಲಿ ರಾಜನಾದ ತಿರುಕನು ದರ್ಪದಿಂದ ರಾಜ್ಯವಾಳುತ್ತಾ ಮುಂದೆ ಮಕ್ಕಳಿಗೆ ಮದುವೆ ಸಮಾರಂಭಗಳನ್ನು ಮಾಡುತ್ತಾ, ನಾಲ್ಕು ಜನ ಮೆಚ್ಚುವಂತೆ ಇದ್ದನು. ಆಗ ಅವನಿಗೆ ಧನದಮದ, ರಾಜ್ಯಮದ, ತನುಜಮದ, ಯುವತಿ ಮದಗಳು ಬೆಳೆದು ಅಹಂಕಾರದಲ್ಲಿರುವಾಗ ನೆರೆಯ ರಾಜ್ಯದವರು ಬಂದು ಮುತ್ತಿಗೆ ಹಾಕಿದಂತಾಗಿ ಹೆದರಿ ಕಣ್ಣು ತೆರೆದನು.

4. **ತಿರುಕನ ಕನಸು ಪದ್ಯದಿಂದ ತಿಳಿದು ಬರುವ ನೀತಿ ಏನು? ವಿವರಿಸಿ.** **[3]**

ತಿರುಕನು ಕನಸಿನಲ್ಲಿಯೇ ರಾಜನಾಗಿ, ದರ್ಪದಿಂದ ರಾಜ್ಯವಾಳಿ, ಮಕ್ಕಳ ಮದುವೆ ಸಂಭ್ರಮಗಳನ್ನು ಆಚರಿಸುತ್ತಿರುವಾಗ ಅವನಿಗೆ ಅಹಂಕಾರ ಹೆಚ್ಚಾಗಿ ಮೆರೆಯುತ್ತಿರುವಾಗ ಅನ್ಯ ರಾಜರು ಮುತ್ತಿಗೆ ಹಾಕಿದರು ಎಂಬ ಸಾಲುಗಳು ಎಚ್ಚರಿಕೆಯನ್ನು ನೀಡುತ್ತವೆ. ಎಷ್ಟೇ ಅಧಿಕಾರ, ಅಂತಸ್ತು, ಐಶ್ವರ್ಯಗಳು ಬಂದಾಗ ಮದೋನ್ಮತ್ತರಾಗಬಾರದು. ಅಹಂಕಾರದಿಂದ ನಡೆದುಕೊಳ್ಳಬಾರದು. ಇದು ಶಾಶ್ವತವಲ್ಲವೆಂಬ ಅರಿವಿರಬೇಕು. ಬಂದ ಐಶ್ವರ್ಯವನ್ನು ಸತ್ಕಾರ್ಯಗಳಿಗೆ ಉಪಯೋಗಿಸಿ ದಾನ ಧರ್ಮಗಳನ್ನು ಮಾಡಬೇಕು. ನಮ್ಮ ಅಂತರಾತ್ಮಕ್ಕೆ ವಾಸ್ತವದ ಸ್ಥಿತಿ ತಿಳಿದಿರಬೇಕು. ಬೇರೆಯವರು ಕನ್ನ ಹಾಕುವರೆಂಬ ಭಯದಲ್ಲಿ ಬದುಕಬಾರದು ಎಂಬ ಎಚ್ಚರಿಕೆಯನ್ನು ನೀಡುತ್ತದೆ. ಕನಸಿಗೂ ವಾಸ್ಥವಕ್ಕೂ ವ್ಯತ್ಯಾಸವಿದೆ ಎಂಬ ನೀತಿಯನ್ನು ಈ ಪದ್ಯ ತಿಳಿಸುತ್ತದೆ.

## Question 9

**ಅಲಸದೆ ಸಮಸ್ತ ಭೂಮಂಡಲವನಾಳ್ವ ರವಿ**
**ಕುಲಜರಪ್ಪಿಕ್ಷ್ವಾಕುವಂಶದರಸುಗಳೊಳತಿ**
**ಬಲರೆನಿಸಿ ಮನವಚನಕಾಯದೊಳಗೊಮ್ಮೆಯುಂ ಹುಸಿ ಹೊದ್ದದಂತೆ ನಡೆವ ॥**

**[ವಶಿಷ್ಠ ವಿಶ್ವಾಮಿತ್ರರ ವಿವಾದ – ರಾಘವಾಂಕ]**

**1. ವಿಶ್ವಾಮಿತ್ರರು ಕೋಪಗೊಳ್ಳಲು ನೀಡಿರುವ ಮೂರು ಕಾರಣಗಳೇನು? [2]**

ಮೊದಲನೆಯ ಕಾರಣ ತುಂಬಿದ ಸಭೆಯಲ್ಲಿ ಮೊದಲು ತನ್ನನ್ನು ಮಾತನಾಡಿಸದೆ ವಶಿಷ್ಠರನ್ನು ಮಾತನಾಡಿಸಿದನೆಂಬುದು. ಎರಡನೆಯ ಕಾರಣ ವಶಿಷ್ಠರು ಏನೇ ಹೇಳಿದರೂ ಅದಕ್ಕೆ ವಿರೋಧವಾದ ಮಾತುಗಳನ್ನು ಆಡುವುದು ಅವರ ರೂಢಿಯಾಗಿತ್ತು. ಮೂರನೆಯ ಕಾರಣ ಸಮಸ್ತ ಜನರಲ್ಲಿ ಒಳ್ಳೆಯ ಗುಣಗಳನ್ನು ನೋಡದೆ ಬರೀ ಕುಂದುಗಳನ್ನು ಗುರುತಿಸುವುದು ಅವರ ಸ್ವಭಾವವಾಗಿರುವುದು – ಈ ಮೂರು ಕಾರಣಗಳು ವಿಶ್ವಾಮಿತ್ರರು ಕೋಪಗೊಳ್ಳಲು ಕಾರಣವಾಗಿವೆ.

**2. ದೇವೇಂದ್ರನ ಸಭೆಯಲ್ಲಿ ಕುಳಿತಿದ್ದ ವಶಿಷ್ಠ ವಿಶ್ವಾಮಿತ್ರರನ್ನು ಕವಿ ರಾಘವಾಂಕ ಹೇಗೆ ವರ್ಣಿಸಿದ್ದಾನೆ ? [2]**

ದೇವೇಂದ್ರನ ಸಭೆಯಲ್ಲಿ ಕುಳಿತಿದ್ದ ವಶಿಷ್ಠ ವಿಶ್ವಾಮಿತರು ಅಂಗಾಂಗಗಳ ನಡುವೆ ಕಣ್ಣುಗಳು ಪ್ರಧಾನವಾಗಿರುವಂತೆ, ನವಗ್ರಹಗಳ ನಡುವೆ ಇರುವ ಸೂರ್ಯ ಚಂದ್ರರಂತೆ, ನದಿಗಳಲ್ಲಿ ಪ್ರಧಾನವಾಗಿರುವ ಗಂಗೆ, ತುಂಗಭದ್ರಗಳಂತೆ ಪ್ರಧಾನರಾಗಿ ಇದ್ದರು ಎಂದು ಕವಿ ರಾಘವಾಂಕ ವರ್ಣಿಸಿದ್ದಾರೆ.

**3. ದೇವಲೋಕಕ್ಕೆ ಬಾರೆಂ ಪ್ರತಿಜ್ಞೆಯೆನಗೆಂದ ವಿಶ್ವಾಮಿತ್ರನು"– ಸಂದರ್ಭದೊಡನೆ ವಿವರಿಸಿ. [3]**

ಈ ವಾಕ್ಯವನ್ನು ರಾಘವಾಂಕನು ಬರೆದ ಹರಿಶ್ಚಂದ್ರ ಕಾವ್ಯದಿಂದ ಆರಿಸಲಾಗಿರುವ 'ವಶಿಷ್ಠ– ವಿಶ್ವಾಮಿತ್ರರ ವಿವಾದ' ಎಂಬ ಪದ್ಯದಿಂದ ಆರಿಸಲಾಗಿದೆ. ಈ ಮಾತನ್ನು ವಿಶ್ವಾಮಿತ್ರನು ದೇವೇಂದ್ರನಿಗೆ ಹೇಳಿದನು.
ಭೂಮಿಯಲ್ಲಿ ನಾಲ್ಕು ಯುಗಗಳು ಸಾವಿರ ಸಲ ಮರಳಿ, ಮರಳಿ ಬಂದಾಗ ಬ್ರಹ್ಮನಿಗೆ ಒಂದು ದಿನ, ಆ ಒಂದು ದಿನ ೩೦ ಸಲ ಬರಲು ಒಂದು ತಿಂಗಳು, ಆ ರೀತಿಯ ತಿಂಗಳು ೧೨ ಸಲ ಬರಲು ಒಂದು ವರ್ಷ, ಅಂತಹ ಒಂದು ವರ್ಷವು ನೂರು ಸಲ ಬಂದರೆ ದೇವೇಂದ್ರನಿಗೆ ಪರಮಾಯುವು ಅಂತಹ ಪರಮಾಯುವು ಸಂಭವಿಸುವವರೆಗೂ ದೇವಲೋಕಕ್ಕೆ ಕಾಲು ಇಡುವುದಿಲ್ಲವೆಂದು ವಿಶ್ವಾಮಿತ್ರನು ಪ್ರತಿಜ್ಞೆ ಮಾಡಿದನು.

**4. ಹರಿಶ್ಚಂದ್ರ ಸುಳ್ಳು ಆಡಿದರೆ ವಶಿಷ್ಠರು ಏನು ಮಾಡುವೆನೆಂದು ಪ್ರತಿಜ್ಞೆ ಮಾಡಿದರು? [3]**

ವಶಿಷ್ಠನು ತಾನು ಶ್ರುತಿ ಮತಕುಲಾಚಾರ, ಧರ್ಮ ಮಾರ್ಗ, ಮಹಾ ವ್ರತಾನುಷ್ಠಾನ, ಗುರುವಿನ ಆ' ಪರಿಪಾಲಕ, ಉತ್ತಮ ಲಿಂಗಾರ್ಚನೆ ಮಾಡಿದವನು. ಬ್ರಹ್ಮಕರ್ಮ ಮುಂತಾದ ಆಚರಣೆಗಳನ್ನು ಬಿಡದೆ ಆಚರಿಸಿರುವ ಕಾರಣದಿಂದ ಬಂದಿರುವ ಪುಣ್ಯವನ್ನು ತೊರೆದು, ತನ್ನ ಕೂದಲನ್ನು ಬಿರಿಹೊಯ್ದುಕೊಂಡು ಮನುಷ್ಯರ ಕಪಾಲದೊಳಗೆ ಹೆಂಡವನ್ನು ಸುರಿದುಕೊಂಡು ಕುಡಿಯುತ್ತಾ, ಹೆಂಡತಿಯನ್ನು ಬಿಟ್ಟು, ದಿಗಂಬರನಾಗಿ, ದಕ್ಷಿಣಾಭಿಮುಖವಾಗಿ ಹೊರಟು ಹೋಗುತ್ತೇನೆ ಎಂದು ಪ್ರತಿಜ್ಞೆಮಾಡಿದನು.

## Question 10

**ಅಕ್ಕಿಯೊಳಗನ್ನವನು ಮೊದಲಾರು ಕಂಡವರನು? ।**
**ಅಕ್ಕರದ ಬರಹಕ್ಕೆ ಮೊದಲಿಗನಾರು? ॥**
**ಲೆಕ್ಕವಿರಿಸಿಲ್ಲ ಜಗ ತನ್ನಾದಿ ಬಂಧುಗಳ ।**
**ದಕ್ಕುವುದೆ ನಿನಗೆ ಜಸ? ಮಂಕುತಿಮ್ಮ॥** **[ ಮಂಕುತಿಮ್ಮನ ಕಗ್ಗ – ಡಿ.ವಿ.ಜಿ.]**

**1. "ಲೆಕ್ಕವಿರಿಸಿಲ್ಲ ಜಗ ತನ್ನಾದಿ ಬಂಧುಗಳ, ದಕ್ಕುವುದೆ ನಿನಗೆ ಜಸ ? ಮಂಕುತಿಮ್ಮ" – ಸಂದರ್ಭ ಸಹಿತ ವಿವರಿಸಿ. [2]**

ಈ ವಾಕ್ಯವನ್ನು ಡಿ.ವಿ.ಜಿಯವರು ಬರೆದ 'ಮಂಕುತಿಮ್ಮನ ಕಗ್ಗ' ಎಂಬ ಪದ್ಯ ಭಾಗದಿಂದ ಆರಿಸಲಾಗಿದೆ. ಈ ಮಾತನ್ನು ಕವಿ ಹಿಂದಿನ ಹಿರಿಯರನ್ನು ಮರೆತು, ಮೆರೆಯುತ್ತಿರುವ ಸಮಾಜಕ್ಕೆ ಹೇಳಿದ್ದಾರೆ.
ನಾಗರೀಕತೆ ಬೆಳೆದಂತೆ ಹೊಸಹೊಸ ಆವಿಷ್ಕಾರಗಳನ್ನು ಕಂಡುಕೊಂಡ ಮಾನವ ಮೊದಲು ಹಸಿ ಆಹಾರವನ್ನು ತಿನ್ನುತ್ತಿದ್ದವನು ಬೇಯಿಸಿ ತಿನ್ನುವುದರ ರುಚಿ ಕಂಡುಕೊಂಡ. ತನ್ನ ಭಾವನೆಗಳಿಗೆ ಅಕ್ಷರದ ರೂಪ ಕೊಟ್ಟು ಬರೆಯುವುದನ್ನು ಕಲಿತುಕೊಂಡ. ಇವೆಲ್ಲವನ್ನು ಮೊದಲು ಯಾರು ಮಾಡಿದರೆಂಬುದಕ್ಕೆ ಯಾವ ದಾಖಲೆಗಳಿಲ್ಲ. ಈ ರೀತಿ ನಮ್ಮ ಹಿಂದಿನವರು ಮಾಡಿದ ಮಹದುಪಕಾರಗಳನ್ನು ಸ್ಮರಿಸದಿದ್ದರೆ ನಮಗೆ ಯಶಸ್ಸು ಸಿಕ್ಕಲು ಸಾಧ್ಯವೇ? ಅವರು ಹಾಕಿದ ಬುನಾದಿಯ ಮೇಲಲ್ಲವೆ ನಮ್ಮ ಮುಂದಿನ ಬೆಳವಣಿಗೆ ನಡೆಯುವುದು ಎಂಬುದನ್ನು ಕವಿ ನೆನಪಿಸಿದ್ದಾರೆ.

**2. ಡಿ.ವಿ.ಜಿ ಯವರು ಎಲ್ಲರೊಳಗೊಂದಾಗಿ ಬಾಳುವುದು ಹೇಗೆಂದು ಹೇಳಿದ್ದಾರೆ? ವಿವರಿಸಿ. [2]**

ಡಿ.ವಿ.ಜಿ ಯವರು ಬೆಟ್ಟದಡಿ ಹುಲ್ಲಾಗಿ ಬೆಳೆದು ಪ್ರಾಣಿಗಳಿಗೆ ಉಪಯೋಗವಾಗುವಂತೆ ಇರಬೇಕೆಂದು ಹೇಳಿದ್ದಾರೆ. ಮಲ್ಲಿಗೆಯ ಹೂವು ತನ್ನ ಪರಿಮಳವನ್ನು ಬೀರಿ ಎಲ್ಲರನ್ನು ಆಕರ್ಷಿಸುವಂತೆ ನಾವು ಮನೆಯವರ ಮನಸನ್ನು ಆಕರ್ಷಿಸಿ ಗೆಲ್ಲಬೇಕು. ಜೀವನದಲ್ಲಿ ಕಷ್ಟಗಳು ಬಂದಾಗ ವಿಚಲಿತರಾಗದಂತೆ ಕಲ್ಲಿನ ಹಾಗೆ ದೃಢವಾಗಿರಬೇಕು. ಬೆಲ್ಲ ಸಕ್ಕರೆಯು ತನ್ನಲ್ಲಿರುವ ಸಿಹಿಯನ್ನು ಹಂಚುವಂತೆ ಎಲ್ಲರಿಗೂ ಕೈಲಾದ ಸಹಾಯವನ್ನು ಮಾಡಿ ಎಲ್ಲರಲ್ಲೂ ಸಮಾನ ಪ್ರೀತಿಯನ್ನು ತೋರಿ ಅವರೊಳಗೆ ಒಂದಾಗಿ ಇರಬೇಕೆಂದು ತಿಳಿಸಿದ್ದಾರೆ.

**3. ಕವಿ ಬದುಕನ್ನು ಯಾವುದಕ್ಕೆ ಹೋಲಿಸಿದ್ದಾರೆ? ಕುದುರೆ ನೀನ್, ಅವನು ಪೇಳ್ದಂತೆ ಪಯಣಿಗರು ಎಂದು ಕವಿ ಏಕೆ ಹೇಳಿದ್ದಾರೆ? [3]**

ಕವಿ ಬದುಕನ್ನು ಜಟಕಾಬಂಡಿಗೆ ಹೋಲಿಸಿದ್ದಾರೆ.
ಡಿ.ವಿ.ಜಿ ಯವರು ಬದುಕನ್ನು ಜಟಕಾಬಂಡಿಗೆ ಹೋಲಿಸಿದ್ದಾರೆ. ಈ ಜಟಕಾಬಂಡಿಯನ್ನು ನಡೆಸುವವನು ವಿಧಿ ಎಂಬ ಸಾಹೇಬ, ಕವಿ ಇಲ್ಲಿ ನಮ್ಮನ್ನು ಕುದುರೆಗೆ ಹೋಲಿಸಿದ್ದಾರೆ. ನಮ್ಮ ಜೊತೆ ಬರುವ ಬಂಡಿಯ ಪ್ರಯಾಣಿಕರನ್ನು ಆರಿಸುವವನು ವಿಧಿ ಎಂಬ ಸಾಹೇಬ. ಈ ಬಂಡಿಯ ಪ್ರಯಾಣವು ಸಂತೋಷವನ್ನು ತರುವ ಮದುವೆ ಮನೆಗೆ ಇರಬಹುದು, ಇಲ್ಲವೇ ದುಃಖ ತರುವ ಸ್ಮಶಾನಕ್ಕೆ ಇರಬಹುದು. ನಾವು ಬದಲಿಸಲು ಸಾಧ್ಯವಿಲ್ಲ. ಬಂಡಿಯ ಜೊತೆಯೇ ನಮ್ಮ ಓಟ. ನಮಗೆ ಓಡಿ ಓಡಿ ಸಾಕಾದಾಗ ಅಂದರೆ ಈ ಜೀವನ ಸಾಕೆನಿಸಿದಾಗ ಚಿಂತಿಸಬಾರದು. ವಿಧಿ ಎಂಬ ಸಾಹೇಬ ನಡೆಸಿದಂತೆ ಅವನು ತೋರಿಸಿದ ದಾರಿಯಲ್ಲಿ ನಡೆಯಬೇಕಾದುದು ಪ್ರಯಾಣಿಕರ ಕರ್ತವ್ಯ ಎಂದು ಕವಿ ಹೇಳಿದ್ದಾರೆ.

**4. ಡಿ.ವಿ.ಜಿ ಯವರ ಪೂರ್ಣ ಹೆಸರೇನು? ಅವರ ಬಗೆಗೆ ಸಂಕ್ಷಿಪ್ತವಾಗಿ ವಿವರಿಸಿ. [3]**

ಡಿ.ವಿ.ಜಿ ಯವರ ಪೂರ್ಣ ಹೆಸರು ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪ.

ಇವರು ೧೮೮೭ ರಲ್ಲಿ ಕೋಲಾರ ಜಿಲ್ಲೆಯ ಮುಳಬಾಗಿಲಿನಲ್ಲಿ ಜನಿಸಿದರು. ಇವರ ತಂದೆ ವೆಂಕಟರಮಣಯ್ಯ ತಾಯಿ ಅಲಮೇಲಮ್ಮ. ೧೦ನೇ ತರಗತಿ ಓದಿ ಆಮೇಲೆ ಸ್ವ ಅಧ್ಯಯನ ಮಾಡಿ ಪಂಡಿತರೆನಿಸಿಕೊಂಡರು. ಇವರು ಬರೆದಿರುವ ಕೃತಿಗಳೆಂದರೆ ಮಂಕುತಿಮ್ಮನ ಕಗ್ಗ, ಅಂತಃಪುರ ಗೀತೆಗಳು, ಉಮರನ ಒಸಗೆ, ಶ್ರೀಮದ್ಭವದ್ಗೀತಾ ತಾತ್ಪರ್ಯ, ಶ್ರೀರಾಮ ಪರೀಕ್ಷಣಂ, ವಸಂತ ಕುಸುಮಾಂಜಲಿ ಇತ್ಯಾದಿ. ಇವರಿಗೆ ದೊರೆತಿರುವ ಪ್ರಶಸ್ತಿಗಳೆಂದರೆ ೧೯೬೧ ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಗೌರವ ಡೀ.ಲಿಟ್. ಪದವಿ ನೀಡಿತು. ೧೯೬೭ ರಲ್ಲಿ ಶ್ರೀಮದ್ಭವದ್ಗೀತಾ ತಾತ್ಪರ್ಯ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ ಬಂದಿದೆ. ೧೯೩೨ ರಲ್ಲಿ ಮಡಕೇರಿಯಲ್ಲಿ ನಡೆದ ೧೮ ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ್ರು.

# ಕಾದಂಬರಿ – ನಾಟ್ಯಮಯೂರಿ

# NOVEL – NATYA MAYURI

## Question 11

**ಜನರೆಲ್ಲಾ ಒಬ್ಬೊಬ್ಬರಾಗಿ ಸರಿದರು. ಶಾ<ತಲೆ ಮಾತ್ರ ಗೋಡೆಯಮೇಲೆ ಬರೆದ ಚಿತ್ರದಂತೆ ನಿಂತಿದ್ದಳು. ಅವ್ಳಿಗೆ ಕುದುರೆಗಳಾಗಲೀ ಅವುಗಳೆಬ್ಬಿಸಿದ ಧೂಳಿಯಾಗಲಿ ಕಾಣಿಸುತ್ತಿರಲಿಲ್ಲ....... [ಅಧ್ಯಾಯ 2]**

**1. ವಿಷ್ಣುವರ್ಧನರು ದ್ವಾರಸಮುದಕ್ಕೆ ಹೊರಟ ದೃಶ್ಯವನ್ನು ಶಿವಗಂಗೆಯಲ್ಲಿ ನೆರೆದಿದ್ದ ಜನರು ಹಾಗೂ ಶಾಂತಲೆಯು ನೋಡಿದ್ದು ಹೇಗೆ? [2]**

ವಿಷ್ಣುವರ್ಧನರು ನೊಳಂಬವಾಡಿಯವರೊಡನೆ ಯುದ್ಧ ಮಾಡಿ ಗೆದ್ದು, ಶಿವಗಂಗೆಯ ಹೊನ್ನಮ್ಮದೇವಿಯ ದರ್ಶನವನ್ನು ಪಡೆದು, ತಮ್ಮ ಕುದುರೆ ಸಮೇತ ನೂರಾರು ಜನ ಬೆಂಗಾವಲಿನವರೊಡನೆ ದ್ವಾರಸಮುದ್ರಕ್ಕೆ ಹೊರಟಾಗ, ಅಲ್ಲಿ ನೆರೆದಿದ್ದವರು ಕುದುರೆಗಳು ಕಣ್ಮರೆಯಾಗುವವರೆಗೂ ನೋಡುತ್ತಲೇ ನಿಂತಿದ್ದರು. ಕ್ರಮೇಣ ತಮ್ಮತಮ್ಮ ಮನೆಗಳ ಕಡೆಗೆ ಕಾಲಿಟ್ಟರು.

ಶಾಂತಲೆಯು ಮಾತ್ರ ಗೋಡೆಗಳ ಮೇಲೆ ಬರೆದ ಚಿತ್ರದಂತೆ ನಿಂತಿದ್ದಳು. ಅವಳಿಗೆ ಕುದುರೆಗಳಾಗಲಿ, ಅವುಗಳೆಬ್ಬಿಸಿದ ಧೂಳಿಯಾಗಲೀ ಕಾಣಿಸುತ್ತಿರಲಿಲ್ಲ. ಆ ಧೂಳಿನ ಮಧ್ಯದಲ್ಲಿ ವಿರಾಜಮಾನವಾಗಿ ಬೆಳಗುತ್ತಿದ್ದ ಮಹಾಮೂರ್ತಿಯೊಂದು ಗೋಚರಿಸುತ್ತಿತ್ತು. ಅದನ್ನೇ ಕಣ್ತಣಿಯೆ, ಮನತಣಿಯೆ ನೋಡುತ್ತಿದ್ದಳು.

**2. ಮಾರಸಿಂಗಮಯ್ಯನವರು ಶಾಂತಲೆಗೆ ದ್ವಾರಸಮುದ್ರದ ಹೊಯ್ಸಳರ ಇತಿಹಾಸವನ್ನು ಕುರಿತು ಹೇಗೆ ಪರಿಚಯಿಸಿದರು? [2]**

ದ್ವಾರಸಮುದ್ರದ ಹೊಯ್ಸಳರು ಸುಮಾರು ಆರು ಶತಮಾನಗಳ ಕಾಲ ಕಲ್ಯಾಣಿ ಚಾಲುಕ್ಯರ ವಶದಲ್ಲಿದ್ದು, ಅವರ ಸಾಮಂತರಾಗಿ ಆಳಿಕೊಂಡು ಬರುತ್ತಿದ್ದರು. ಇದು ಸ್ವತಂತ್ರ ಮನೋವೃತ್ತಿಯ ವ್ಯಕ್ತಿ ಎರೆಯಂಗರಿಗೆ ಸರಿಬೀಳಲಿಲ್ಲ. ಸ್ವತಂತ್ರವಾಗಲು ಇಚ್ಚಿಸಿ ಚಾಲುಕ್ಯರಿಗೆ ಕಪ್ಪ ಸಲ್ಲಿಸಲಿಲ್ಲ. ಆ ಕಾರಣ ಅವರು ದಂಡೆತ್ತಿ ಬಂದಾಗ ಅವರ ಸೇನೆಯನ್ನು ಸದೆಬಡಿದು ಸ್ವತಂತ್ರ ಹೊಯ್ಸಳ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಆದರೂ ಅವರು ಹೆಚ್ಚುಕಾಲ ಬದುಕಲಿಲ್ಲ, ನಂತರ ಅವರ ಹಿರಿಯ ಮಗ ಬಲ್ಲಾಳರು ಪಟ್ಟಾಧಿಕಾರಕ್ಕೆ ಬಂದರು. ಆದರೆ ಚಿಕ್ಕಂದಿನಿಂದಲೂ ಯಾವುದೋ ವಿಚಿತ್ರ ರೋಗ ಕಿತ್ತು ತಿನ್ನುತ್ತಿದ್ದುದರಿಂದ ಅವರೂ ಕೂಡ ಹೆಚ್ಚು ಕಾಲ ಬದುಕಲಿಲ್ಲ. ಆದ್ದರಿಂದ ತೆರವಾದ ಆ ಸ್ಥಾನವನ್ನು ಈಗ ಯುವರಾಜರಾಗಿರುವ ವಿಷ್ಣುವರ್ಧನರು ತುಂಬಬೇಕಾಗಿದೆ ಎಂದು ಮಾರಸಿಂಗಮಯ್ಯನವರು ಶಾಂತಲೆಗೆ ಹೊಯ್ಸಳರ ಇತಿಹಾಸವನ್ನು ವಿವರಿಸಿ ಹೇಳಿದರು.

**3. ರಾಜ ಪರಿವಾರದವರಿಗಾಗಿ ಮೇನೆಗಳನ್ನು ತಂದವರು ಯಾರು? ಮೇನೆಯನ್ನು ಹತ್ತಲು ಶಾಂತಲೆ ನಿರಾಕರಿಸಲು ಕಾರಣವೇನು? [3]**

ರಾಜ ಪರಿವಾರದವರಿಗಾಗಿ ಮೇನೆಗಳನ್ನು ತಂದವರು ಅರಮನೆಯ ಉಸ್ತುವಾರಿ ಬಾಚಿಮಯ್ಯನವರು.

ರಾಜ ಪರಿವಾರದವರು ಬಂದದ್ದು ದೇವಾಲಯಕ್ಕೆ, ಹಿಂದಿರುಗುತ್ತಿರುವುದೂ ದೇವಾಲಯದಿಂದಲೇ, ಯಾರೇ ಆದರೂ ದೇವಾಲಯಕ್ಕೆ ಬರುವಾಗ ಕೇವಲ ಭಕ್ತಿಯೊಂದನ್ನು ಹೊತ್ತುಕೊಂಡು ಬರಿಗಾಲಲ್ಲಿ ನಡೆಯಬೇಕು. ಅದು ಬಿಟ್ಟು ಪಾದರಕ್ಷೆಗಳನ್ನು ಹಾಕಿ, ನಮ್ಮ ಹಣ, ಅಧಿಕಾರ, ಅಂತಸ್ತುಗಳನ್ನಾಗಲೀ ಮೆರೆಯಬಾರದು. ಅದು ಸಭ್ಯತೆಯ ಲಕ್ಷಣವಲ್ಲ, ಸಂಸ್ಕೃತಿಯ ಕುರುಹೂ ಅಲ್ಲ ಎಂಬುದು ಅವಳ ಅಭಿಪ್ರಾಯವಾಗಿತ್ತು. ಅದ್ದರಿಂದ ಶಾಂತಲೆಯು ಮೇನೆಗಳನ್ನು ಹತ್ತಲು ನಿರಾಕರಿಸಿದಳು.

**4. ವಿಷ್ಣುವರ್ಧನರಿಗೆ ಯಾವ ಯಾವ ಕಲೆಗಳಲ್ಲಿ ಆಸಕ್ತಿಯಿತ್ತು? ವಿಷ್ಣುವರ್ಧನನ ವಿದ್ಯೆ, ಪರಾಕ್ರಮ, ಔದಾರ್ಯಗಳನ್ನು ಕುರಿತು ಬರೆಯಿರಿ.** **[3]**

ವಿಷ್ಣುವರ್ಧನರಿಗೆ ಚಿಕ್ಕಂದಿನಿಂದಲೂ ಸಾಹಿತ್ಯ, ಸಂಗೀತ, ಚಿತ್ರ ಮೊದಲಾದ ಲಲಿತ ಕಲೆಗಳಲ್ಲಿ ಆಸಕ್ತಿಯಿತ್ತು. ವಿಷ್ಣುವರ್ಧನರಿಗೆ ಯುದ್ಧವಿದ್ಯೆ ಅಷ್ಟರಮಟ್ಟಿಗೆ ಸಿದ್ಧಿಸಿದೆಯೆಂದು ಡಣಾಯಕರಿಗೆ ತಿಳಿದಿರಲಿಲ್ಲ. ಆದರೆ ಹದಿನೈದು ದಿನಗಳಿಂದ ನೊಳಂಬವಾಡಿಯವರೊಡನೆ ಹೆಂಜೇರುವಿನಲ್ಲಿ ನಡೆದ ಯುದ್ಧದಲ್ಲಿ ಹಗಲು–ರಾತ್ರಿ(ಅಹೋರಾತ್ರಿ) ಡಣಾಯಕರೊಡನಿದ್ದು, ಯುದ್ಧಮಾಡಿ, ಸ್ಫೂರ್ತಿ ತುಂಬಿ ಗೆಲುವಿಗೆ ಕಾರಣರಾದರು. ಅವರು ಪರಾಕ್ರಮಿ ಮಾತ್ರವಲ್ಲ, ಔದಾರ್ಯವಂತರೂ ಆಗಿದ್ದರು. ಅವರ ಪರಾಕ್ರಮ ಮತ್ತು ಔದಾರ್ಯಗಳಿಗೆ ಮಾರು ಹೋದ ನೊಳಂಬವಾಡಿಯ ಗಂಗನೊಳಂಬರು ತಮ್ಮ ಮಗಳು ರಾಜಲೆಯನ್ನು ಕೊಟ್ಟು, ಬಾಂಧವ್ಯದ ಮೂಲಕ ತಮ್ಮ ಸ್ನೇಹವನ್ನು ಹೆಚ್ಚಿಸಿಕೊಳ್ಳಲು ಇಚ್ಚಿಸಿದರು ಎಂದು ವಿಷ್ಣುವರ್ಧನನ ವಿದ್ಯೆ, ಪರಾಕ್ರಮ, ಔದಾರ್ಯಗಳನ್ನು ಕುರಿತು ಮಾರಸಿಂಗಮಯ್ಯನವರು ಹೇಳಿದ್ದಾರೆ.

## Question 12

**ದ್ವಾರಸಮುದ್ರದ ಆಹ್ವಾನಕ್ಕೆ ಓಗೊಟ್ಟು ದೇಶ ವಿದೇಶಗಳಿಂದ ಸಹಸ್ರಾರುಜನ ಅಥಿತಿಗಳು ಆಗಮಿಸಿದ್ದರು. ಅವರಿಗೆಲ್ಲರಿಗೂ ಪ್ರತ್ಯೇಕ ಬಿಡಾರವನ್ನು ಕೊಟ್ಟಿರಲಿಲ್ಲ.......** **[ ಅಧ್ಯಾಯ- 5 ]**

**1. ರಾಜಮಾತೆಯವರು ಶಾಂತಲೆಯನ್ನು "ಇಂತಹ ಸುಲಕ್ಷಣ ಸಂಪನ್ನೆ ಮಹಾರಾಣಿಯಾಗುವುದು ನಾಡಿನ ಪುಣ್ಯ, ನಮ್ಮಮನೆಗೆ ಸೊಸೆಯಾಗಿ ಬರುವುದು ನಮ್ಮ ಭಾಗ್ಯ ವಿಶೇಷ" ಅಂದುಕೊಂಡದ್ದು ಏಕೆ? ವಿವರಿಸಿ.** **[2]**

ವಿಜಯೋತ್ಸವದ ಆಹ್ವಾನಕ್ಕೆ ಓಗೊಟ್ಟು ಎರಡು ದಿವಸಗಳ ಮುಂಚೆಯೇ ದ್ವಾರಸಮುದ್ರಕ್ಕೆ ಮಾರಸಿಂಗಮಯ್ಯನವರ ಪರಿವಾರ ಬಂದು ತಲುಪಿತು. ಅವರನ್ನು ಸ್ವಯಂ ರಾಜಮಾತೆಯವರೇ ಸ್ವಾಗತಿಸಿದರು. ಶಾಂತಲೆ ಮೊದಲು ಬಂದು ರಾಜಮಾತೆಯವರ ಪಾದಗಳಿಗೆ ಹಣೆಹಚ್ಚಿ ನಮಸ್ಕರಿಸಿದಳು. ರಾಜಮಾತೆಯವರು ಕೂಡಲೇ ಅವಳ ಎರಡೂ ತೋಳುಗಳನ್ನು ಹಿಡಿದು ಮೇಲೆತ್ತಿ ಆಲಂಗಿಸಿಕೊಡರು. ಶಾಂತಲೆಯ ಸಂಸ್ಕೃತಿ, ಸಜ್ಜನಿಕೆಗಳನ್ನು ಕಣ್ತುಂಬ ನೋಡಿ ಅಮಿತಾನಂದವಾಯಿತು. ದಂತದಿಂದ ಮಾಡಿದ ಬೊಂಬೆಯಂತೆ ಕಂಗೊಳಿಸುತ್ತಿದ್ದ ಶಾಂತಲೆಯ ಚಲುವಿನ ಜೊತೆಗೆ ರಾಜಮನೆತನಕ್ಕೆ ಯೋಗ್ಯವಾದ ಸಾಮುದ್ರಿಕಾ ಲಕ್ಷಣಗಳು ಇದ್ದುದನ್ನು ಕಂಡ ರಾಜಮಾತೆಯವರು ತಮ್ಮ ಮನಸ್ಸಿನಲ್ಲಿಯೇ "ಇಂತಹ ಸುಲಕ್ಷಣ ಸಂಪನ್ನೆ ಮಹಾರಾಣಿಯಾಗುವುದು ನಾಡಿನ ಪುಣ್ಯ, ನಮ್ಮಮನೆಗೆ ಸೊಸೆಯಾಗಿ ಬರುವುದು ನಮ್ಮ ಭಾಗ್ಯ ವಿಶೇಷ" ಅಂದುಕೊಂಡರು.

**2. "ಸೂರ್ಯನ ಎದುರಿನಲ್ಲಿ ಕಿರು ಹಣತೆಗೇಕೆ ಪ್ರತಿಷ್ಠೆ" ಎಂದು ಶಾಂತಲೆ ಹೇಳಿದಾಗ ರಾಜಮಾತೆಯವರು ಆಡಿದ ಮಾತುಗಳೇನು?** **[2]**

ಶಾಂತಲೆಯ ವಿನಯವಂತಿಕೆಯನ್ನು ಮೆಚ್ಚಿ ರಾಜಮಾತೆಯವರು, "ಸೂರ್ಯನ ಶ್ರೇಯಸ್ಸಿಗೆ ಜ್ಯೋತಿಯ ಹಾರೈಕೆ ಆರತಿಯ ರೂಪದಲ್ಲಿ ಅಭಿವ್ಯಕ್ತವಾಗಬೇಕು. ಶಾಂತಲಾ, ನೀನು ನಮ್ಮ ಮನೆಯ ಜ್ಯೋತಿ. ಅಷ್ಟೇ ಅಲ್ಲ, ಈ ಸಾಮ್ರಾಜ್ಯದ ಸಕಲ ಸಂಪದಕ್ಕೂ ನೀನು ರಾಜಲಕ್ಷ್ಮಿ. ಇಂದಿನವರೆಗೂ ಕತ್ತಲಾಗಿದ್ದ ಅರಮನೆ ನಿನ್ನಿಂದ ಬೆಳಕಾಗಬೇಕಾಗಿದೆ. ಹೊಯ್ಸಳರು ಚಾಲುಕ್ಯರಿಂದ ಸಂಪೂರ್ಣ ಸಾಮ್ರಾಟರೆನಿಸಿ ಬಾಳಬೇಕಾಗಿದೆ. ನಿನ್ನಂಥವಳು ನಮ್ಮ ಮನೆಗೆ ಸೊಸೆಯಾಗಿ ಬರುವುದರಿಂದ ಅದು ವೃದ್ಧಿಯಾದೀತು. ನಿನ್ನ ಸದ್ಗುಣ, ಸೌಜನ್ಯಗಳಿಂದ ನಾಡಿನ ಆತ್ಮಬಲ ಹೆಚ್ಚಬಹುದು" ಎಂದು ಶಾಂತಲೆಗೆ ಹೇಳಿದರು.

**3. ವಿಶ್ವಸೃಷ್ಟಿಗೆ ಕಾರಣೀಭೂತವಾದ ಶಕ್ತಿ ಯಾವುದು? ಅದನ್ನು ಲೇಖಕರು ಹೇಗೆ ಬಣ್ಣಿಸಿದ್ದಾರೆ? [3]**

ವಿಶ್ವಸೃಷ್ಟಿಗೆ ಕಾರಣೀಭೂತವಾದ ಶಕ್ತಿ ಆದಿಶಕ್ತಿ.

ಆದಿಶಕ್ತಿ ಪರಾತ್ಪರಶಕ್ತಿ! ಯಾವ ಶಕ್ತಿ ನೀರನಲ್ಲಿ ತಂಪಾಗಿ, ಗಾಳಿಯಲ್ಲಿ ವೇಗವಾಗಿ, ಸೂರ್ಯನಲ್ಲಿ ತೇಜಸ್ಸಾಗಿ, ಚಂದ್ರನಲ್ಲಿ ಕಾಂತಿಯಾಗಿ, ನಕ್ಷತ್ರದಲ್ಲಿ ನಗೆಯಾಗಿ, ಹೂವಿನಲ್ಲಿ ಪರಿಮಳವಾಗಿ, ಹಕ್ಕಿಯ ಕಂಠದಲ್ಲಿ ಹಾಡಾಗಿ, ಕಲ್ಲಿನಲ್ಲಿ ಘನೀಭೂತ ಶಕ್ತಿಯಾಗಿ ನೆಲೆ ನಿಂತಿದೆಯೋ ಅದೇ ಶಕ್ತಿ ಉಳಿಯಲ್ಲಿ ಸೇರಿ ಶಿಲ್ಪಿಯನ್ನು , ಕುಂಚದಲ್ಲಿ ಸೇರಿ ಚಿತ್ರಕಾರನನ್ನೂ, ಲೇಖನಿಯಲ್ಲಿ ಅಡಗಿ ಕವಿಯನ್ನು, ನಾದದಲ್ಲಿ ಬೆರೆತು ಗಮಕಿಯನ್ನೂ, ಅಭಿನಯದಲ್ಲಿ ಕರಗಿ ನರ್ತಕಿಯನ್ನು, ಜ್ಞಾನದಲ್ಲಿ ಬೆಳಗಿ ವಿಜ್ಞಾನಿ, ವಿಶ್ವಜ್ಞಾನಿ, ರಾಜಕಾರಣಿ, ಸಂತ, ಸಾಮ್ರಾಟರನ್ನು ಸೃಷ್ಟಿಸಿದೆ. ಅಣುರೇಣು ತೃಣಕಾಷ್ಠಗಳಲ್ಲೂ ಈ ಶಕ್ತಿಯುಅದು ಅಡಗಿದೆಯೆಂದು ಲೇಖಕರು ಬಣ್ಣಿಸಿದ್ದಾರೆ.

**4. ಆಳುವ ಪ್ರಭುಗಳಿಗೆ ಯಾವುದು ವಜ್ರರಕ್ಷೆಯಾಗುತ್ತದೆ? ರಾಜನು ಬಹುವಲ್ಲಭನಾಗುವುದರಿಂದ ಆಗುವ ಅನುಕೂಲಗಳೇನು? [3]**

ಅಂತಃಪುರದ ಪಾತಿವ್ರತ್ಯ, ಪ್ರಜಾಕೋಟಿಯ ಧಾರ್ಮಿಕ ಪ್ರವೃತ್ತಿ ಇವೇ ಆಳುವ ಪ್ರಭುಗಳಿಗೆ ವಜ್ರರಕ್ಷೆಯಾಗುತ್ತದೆ.

ಅರಸನೆಂದರೆ ಸಾಕು ಅವನಿಗೆ ಹಲವಾರು ಪತ್ನಿಯರು ಇರುವುದು ಸಾಮಾನ್ಯ. ಪದವಿ ಗೌರವಗಳು ನೂರಾರು. ಸಾಮ್ರಾಜ್ಯದ ಅರಸನು ಅಕ್ಕಪಕ್ಕದ ಅರಸರೊಡನೆ ಬಾಂಧವ್ಯ ಬೆಳೆಸುವುದರಿಂದ ಆ ರಾಷ್ಟ್ರದ ರಾಜಕೀಯ ಸುಧಾರಿಸುತ್ತದೆ. ಏಕೆಂದರೆ, ಈ ಬಾಂಧವ್ಯ ಶತ್ರುಗಳಲ್ಲಿ ಭೀತಿ ಹುಟ್ಟಿಸುವುದಲ್ಲದೆ, ಭಕ್ತಿಭಾವವನ್ನೂ ಬೆಳೆಸುತ್ತದೆ. ಆ ಮೂಲಕ ಸಾಮ್ರಾಜ್ಯ ಸುಭದ್ರವಾಗುತ್ತದೆಯೆಂಬುದು ಹಿಂದಿನವರ ಅಭಿಪ್ರಾಯವಾಗಿತ್ತು. ಆದ್ದರಿಂದ ರಾಜನು ಬಹುವಲ್ಲಭನಾಗುವುದು ಬಹಳ ಉತ್ತಮ ಎಂಬ ಅಭಿಪ್ರಯವನ್ನು ಶಾಂತಲೆಯು ಸೂಚಿಸಿದಳು.

## Question 13

**ಅವಳಿ ದೇಗುಲಗಳ ನಿರ್ಮಾಣ ದ್ವಾರ ಸಮುದ್ರದಲ್ಲಿ ಎಂದು ನಿರ್ಧಾರವಾಯಿತು. ಸಾದೋಜ ಮುಖ್ಯ ಸ್ಥಪತಿ. ಮಲ್ಲಿ ಮತ್ತು ಹಾಲೋಜರು ರೂವಾರಿಗಳು...... [ಅಧ್ಯಾಯ - 9]**

**1. ದ್ವಾರಸಮುದ್ರದಲ್ಲಿ ನಿರ್ಮಾಣವಾದ ಅವಳಿ ದೇಗುಲಗಳು ಯಾವುವು? ಆ ದೇವಾಲಯಗಳ ವಿನ್ಯಾಸವನ್ನು ಕುರಿತು ಬರೆಯಿರಿ. [2]**

ದ್ವಾರಸಮುದ್ರದಲ್ಲಿ ನಿರ್ಮಾಣವಾದ ಅವಳಿ ದೇಗುಲಗಳು ಹೊಯ್ಸಳೇಶ್ವರ ಮತ್ತು ಶಾಂತಲೇಶ್ವರ. ದ್ವಾರಸಮುದ್ರದ ಆಗ್ನೇಯ ದಿಕ್ಕಿನ ವಿಶಾಲ ಮೈದಾನದಲ್ಲಿ ಶಂಕುಸ್ಥಾಪನೆಯ ಕಾರ್ಯವು ಆಗಿ ಮುಗಿದಿತ್ತು, ಅರಡಿ ಎತ್ತರದ ಎರಡು ಶಿವಲಿಂಗಗಳನ್ನು ಪ್ರತಿಷ್ಠಾಪಿಸಬೇಕು, ಅವುಗಳಿಗೆ ಎದುರಾಗಿ ಎರಡು ಬೃಹತ್ ಆಕಾರದ ನಂದಿಗಳನ್ನು ನೆಲೆಗೊಳಿಸಬೇಕೆಂಬುದು ಶಾಂತಲಾದೇವಿ ತಿಳಿಸಿದ್ದಳು. ಸೂರ್ಯೋದಯವಾದ ಕೂಡಲೇ ಸೂರ್ಯನ ಪ್ರಥಮ ಕಿರಣ ಆ ನಂದಿಗಳ ಕೊಂಬುಗಳ ಮಧ್ಯದಲ್ಲಿ ಹಾಯ್ದು, ಗರ್ಭಗುಡಿಯ ಶಿವಲಿಂಗಗಳ ನೆತ್ತಿಯ ಮೇಲೆ ಪ್ರಕಾಶಿಸುವಂತೆ ಹೊಸ ವೈಜ್ಞಾನಿಕ ವಿನ್ಯಾಸವನ್ನು ಅಳವಡಿಸಲಾಗಿತ್ತು.

**2. ಹಣದ ಅಭಾವವನ್ನು ದೂರಮಾಡಲು ಸಚಿವ ಸಂಪುಟದವರು, ರಾಜ್ಯದ ಮುಖಂಡರು ಏನೆಂದುಅಭಿಪ್ರಾಯಪಟ್ಟರು? [2]**

ಕಲ್ಯಾಣಿ ಚಾಲುಕ್ಯರು ಸ್ವತಂತ್ರ ಸಾಮ್ರಾಟರೆನಿಸಿದ ಹೊಯ್ಸಳೇಶ್ವರ ವಿಷ್ಣುವರ್ಧನನನ್ನು ಸೋಲಿಸಿ, ಮತ್ತೆ ತಮ್ಮ ಸಾಮಂತರನ್ನಾಗಿ ಮಾಡಿಕೊಳ್ಳಲಿಚ್ಛಿಸಿ, ದ್ವಾರಸಮುದ್ರದ ಮೇಲೆ ದಾಳಿಯೊಂದನ್ನು ಘೋಷಿಸಿದರು. ಹಣದ ಅಭಾವದಿಂದ ರಾಜ - ರಾಣಿಯರೂ, ಸಚಿವ ಸಂಪುಟವೂ ತುಂಬಾ ಚಿಂತೆಗೊಳಗಾಯಿತು. ರಹಸ್ಯ ಸಭೆಯಲ್ಲಿ

ರಾಜ ಪರಿಸ್ಥಿತಿಯನ್ನು ವಿವರಿಸಿದ. ವಿಶೇಷ ತೆರಿಗೆಯನ್ನು ಹಾಕಿ ಯುದ್ಧದ ವೆಚ್ಚವನ್ನು ಸರಿದೂಗಿಸಬೇಕೆಂದು ಕೆಲವರು ಅಭಿಪ್ರಾಯಪಟ್ಟರು.

**3. ಶಾಂತಲಾದೇವಿಯವರು ತಮ್ಮ ಹೊನ್ನು, ಒಡವೆಗಳನ್ನು ಉಪಯೋಗಿಸುವ ವಿಷಯದಲ್ಲಿ ಗಂಗರಾಜರನ್ನು, ಹೊಯ್ಸಳ ಸಿಂಹಾಸನದ ಅಭಿಮಾನಿಗಳನ್ನು ಹೇಗೆ ಸಮಾಧಾನ ಪಡಿಸಿದಳು? ವಿವರಿಸಿ.** **[3]**

"ಹೆಣ್ಣಿನ ತೌರಿನವರಾಗಲೀ, ಗಂಡನ ಮನೆಯವರಾಗಲೀ ಕೊಡುವ ಬಂಗಾರ ಭೂಷಣ ಪ್ರಾಯವಾಗಿರಲಿ ಎಂದಲ್ಲ. ಸಂಕಷ್ಟ ಸಂದರ್ಭಗಳಲ್ಲಿ ಸಹಾಯಕವಾಗಲಿ ಎಂದು, ಆ ಸಂಪತ್ತು ನಮ್ಮ ನಮ್ಮ ವಿಪತ್ತುಗಳಲ್ಲಿ ನೆರವಾಗಬೇಕು. ಕೇಳಿ, ಹೊನ್ನು, ಒಡವೆಗಳು ಸುಭಿಕ್ಷ ಕಾಲದಲ್ಲಿ ಶೃಂಗಾರದ ವಸ್ತುಗಳು, ಅವುಗಳೇ ಯುದ್ಧದ ವೇಳೆಯಲ್ಲಿ ರಾಷ್ಟ್ರರಕ್ಷಣೆಯ ಆಯುಧಗಳು. ಆದ್ದರಿಂದ ವೃಥಾ ಚರ್ಚೆಗೆ ಅವಕಾಶ ನೀಡದೆ ಆತ್ಮ ಸಂತೋಷದಿಂದ ಒಪ್ಪಿಸುತ್ತಿರುವ ಅಂತಃಪುರದ ಹೊನ್ನನ್ನು ತೆಗೆದುಕೊಂಡು ಯುದ್ಧದ ಯಶಸ್ಸಿಗೆ ಕಾರಣರಾಗಬೇಕೆಂದು ಬೇಡುತ್ತೇನೆ" ಎಂದು ಹೇಳಿ ಗಂಗರಾಜರನ್ನು, ಹೊಯ್ಸಳ ಸಿಂಹಾಸನದ ಅಭಿಮಾನಿಗಳನ್ನು ಸಮಾಧಾನಪಡಿಸಿದಳು.

**4. ನಿಡುವಳ್ಳಿಯ ಬಳಿ ಯಾರ ಯಾರ ನಡುವೆ ಸಂಗ್ರಾಮ ನಡೆಯಿತು? ಯುದ್ಧದ ಪರಿಣಾಮವೇನಾಯಿತು?** **[3]**

ನಿಡುವಳ್ಳಿಯ ಬಳಿ ಚಾಲುಕ್ಯ ಸೇನೆ ಹಾಗೂ ಹೊಯ್ಸಳ ಸೇನೆಯ ನಡುವೆ ಸಂಗ್ರಾಮ ನಡೆಯಿತು. ಮಹಾರಾಣಿಯವರ ಮಹಾ ತ್ಯಾಗದಿಂದ ಯುದ್ಧ ಸಂದರ್ಭದ ಆರ್ಥಿಕ ಮುಗ್ಗಟ್ಟು ಅಷ್ಟಾಗಿ ಗೋಚರಿಸಲಿಲ್ಲ. ಕೇವಲ ಹೊಟ್ಟೆ ಪಾಡಿಗಾಗಿ ಹೋರಾಡುವ ಚಾಲುಕ್ಯಸೇನೆ ರಾಷ್ಟ್ರನಿಷ್ಠೆಯ ಹೊಯ್ಸಳ ಸೇನೆಯ ಎದುರು ನಿಲ್ಲದಾಯಿತು. ಕೆಲವೇ ದಿನಗಳಲ್ಲಿ ಚಾಲುಕ್ಯಸೇನೆ ನುಚ್ಚುನೂರಾಯಿತು. ಗೆಲುವು ದ್ವಾರಸಮುದ್ರದ್ದಾಯಿತು. ಸುಮಾರು ಆರು ಶತಮಾನಗಳ ಕಾಲ ಚಾಲುಕ್ಯರ ದಾಸ್ಯದಲ್ಲಿ ನೊಂದಿದ್ದ ಹೊಯ್ಸಳ ಸಾಮ್ರಾಜ್ಯ ಅಂದು ಸ್ವತಂತ್ರ ಸಾಮ್ರಾಜ್ಯವಾಗಿ ಮೆರೆಯಿತು.

## [ನಾಟಕ – ಹೂವಿ]

## DRAMA – HOOVI

### Question 14

**"ಅಯ್ಯೋ ಯಾಕೆ ಜಗಳ? ಬಿಡೇ?**

**ನಿಮ್ಮಣ್ಣ ಇನ್ನೂ ಗಿಡ ತರಬೇಕಲ್ಲ?"** **[ದೃಶ್ಯ-1]**

**"ಬಳ್ಳಿಗೆ ತಾಯಿ ಭಾರಾನಾ? ಕುದುರೆಗ್ವೆ ಸವಾರ ಭಾರನಾ?".......** **[ದೃಶ್ಯ-2]**

**ಪ್ರಶ್ನೆಗಳು:**

**1. ಹೊನ್ನೆ ತೋಪಿನಲ್ಲಿ ಯಾರು ಇದ್ದರು? ಅಲ್ಲಿ ಇದ್ದಕ್ಕಿದ್ದಂತೆ ಏನಾಯಿತು?** **[2]**

ಹೊನ್ನೆ ತೋಪಿನಲ್ಲಿ  ಗೌಡರ ಮಗಳು ಬೆಳ್ಳಿ ಇದ್ದಳು.
ಅವಳ ಸಖಿಯರ ಜೊತೆ ಹಗ್ಗದ ಆಟ ಆಡುತ್ತಿದ್ದಳು. ಕೊನೆಗೆ ಎಲ್ಲರಿಗೂ ಆಯಾಸವಾಗಿ ಹೊನ್ನೆಯ ಮರದಡಿ ಕುಸಿದು ಏದುಸಿರು ಬಿಡುತ್ತಾ ಕುಳಿತಿರುತ್ತಾರೆ. ಇದ್ದಕ್ಕಿದ್ದಂತೆ ತಂಗಾಳಿ ಬೀಸತೊಡಗುತ್ತದೆ. ಮಧುರವಾದ ಆಲಾಪ ಪ್ರಾರಂಭವಾಗುತ್ತದೆ. ಯಾವುದೋ ಹೂವಿನ ಪರಿಮಳ ಹರಡುತ್ತದೆ. ಆಗ ಕಾಲು ಚಾಚಿ ಕುಳಿತಿದ್ದ ಬೆಳ್ಳಿ ಕುಕ್ಕರಗಾಲಿನಲ್ಲಿ ಕುಳಿತು ಈ ಪರಿಮಳ ಯಾವ ಹೂವಿನದು? ಎಂದು ಕೇಳುತ್ತಾಳೆ. ಸಖಿಯರು ಮಲ್ಲಿಗೆ, ಸಂಪಿಗೆ, ಜಾಜಿ, ಎಂದಾಗ ಆ ಹೂಗಳ ಪರಿಚಯ ನನಗಿದೆ. ಆದರೆ ಅದಾವುದೂ ಅಲ್ಲ ಎಂದಾಗ, ಇದು ಸುರಲೋಕದ 'ಸುರಹೊನ್ನೆ' ಇರಬೇಕೆಂದು ತೀರ್ಮಾನಿಸುತ್ತಾರೆ.

**2. "ಆಹಾ! ಎಂಥ ಪರಿಮಳವೇ ಇದು? ಯಾ ಹೂವೇ ಇದು?"-ಸಂದರ್ಭದೊಡನೆ ವಿವರಿಸಿ. [2]**

ಈ ವಾಕ್ಯವನ್ನು ಎಚ್.ಎಸ್. ವೆಂಕಟೇಶಮೂರ್ತಿಯವರು ಬರೆದಿರುವ 'ಹೂವಿ' ನಾಟಕದ ಮೊದಲನೆಯ ದೃಶ್ಯದಿಂದ ಆರಿಸಲಾಗಿದೆ. ಈ ಮಾತನ್ನು ಬೆಳ್ಳಿ ತನ್ನ ಸಖಿಯರಿಗೆ ಕೇಳುತ್ತಾಳೆ.
ಬೆಳ್ಳಿ ಹಗ್ಗದ ಆಟ ಆಡಿ ಆಯಾಸದಿಂದ ಕಾಲು ಚಾಚಿ ಕುಳಿತಿದ್ದಾಗ, ಇದ್ದಕ್ಕಿದ್ದಂತೆ ತಂಗಾಳಿ ಬೀಸುತ್ತದೆ. ಆ ತಂಗಾಳಿ ಹೂವಿನ ಪರಿಮಳವನ್ನು ಹೊತ್ತು ತರುತ್ತದೆ. ಜೋರಾಗಿ ಉಸಿರಾಡಿದಾಗ ಆ ಸುಗಂಧದ ಅರಿವಾಗಿ ತಕ್ಷಣ ಕುಕ್ಕರಗಾಲಿನಲ್ಲಿ ಕುಳಿತು ಯಾವ ಹೂವಿನ ಪರಿಮಳ, ಇದರ ಪರಿಚಯವಿಲ್ಲವಲ್ಲ ಎಂದು ಯೋಚಿಸಿ ತನ್ನ ಸಖಿಯರಿಗೆ ತಿಳಿದಿರಬಹುದೆಂದು ಅವರನ್ನು ಈ ಮೇಲಿನಂತೆ ಕೇಳುತ್ತಾಳೆ.

**3. ಬೆಳ್ಳಿ ಹೂವನ್ನು ತಂದು ಅಣ್ಣನಿಗೆ ತೋರಿಸಿದಾಗ ಅಣ್ಣನ ಪ್ರತಿಕ್ರಿಯೆ ಏನು? [3]**

ಹೊನ್ನ ಕುದುರೆಯೊಂದಿಗೆ ತನ್ನ ಬೇಸರಕ್ಕೆ ಕಾರಣವೇನೆಂದು ಹೇಳಿಕೊಳ್ಳುವಾಗ ಬೆಳ್ಳಿ ಹೂವೊಂದನ್ನು ಹಿಡಿದು ಓಡಿ ಬಂದು "ಅಣ್ಣ, ನೋಡಿದೆಯಾ ಹೇಗಿದೆ?" ಎಂದು ಪ್ರಶ್ನಿಸುತ್ತಾಳೆ. ಆಗ ಹೊನ್ನ ಆ ಹೂವನ್ನು ಕೈಯಲ್ಲಿ ಹಿಡಿದು ಇದು ನನ್ನ ತಂಗಿಯ ಮುಖದಂತೆ ಮುದ್ದಾಗಿದೆ ಎಂದು ಹೇಳುತ್ತಾನೆ. ಇಂತಹ ಪರಿಮಳವಿರುವ ಹೂವು ನನ್ನ ತಂಗಿಯ ಮುಡಿಯಲ್ಲಿ ಇರಬೇಕೆಂದು ಅವಳ ಮುಡಿಯಲ್ಲಿಡುತ್ತಾನೆ. ಆ ಗಿಡ ಎಲ್ಲಿದೆ ಹೇಳು ಆ ಗಿಡವನ್ನೇ ತಂದು ಪ್ರತಿದಿನ ನೀನು ಹೂವನ್ನು ಪಡೆಯುವಂತೆ ಮಾಡುತ್ತೇನೆ ಎಂದು ಹೇಳುತ್ತಾನೆ. ಆಗ ಬೆಳ್ಳಿ ಹೂವು ಮತ್ತು ಅ ಗಿಡ ಬೇಕು ಆದರೆ ಅದು ಎಲ್ಲಿದೆ ಎಂದು ತಿಳಿಯದೆಂದಾಗ, ಅದು ಅತಳ, ವಿತಳ, ಪಾತಾಳದಲ್ಲಿದ್ದರೂ ಹುಡುಕಿಸಿ ತರುತ್ತೇನೆಂದು ಹೇಳಿದನು. ಆಗ ಬೆಳ್ಳಿಗೆ ಆನಂದವಾಗುತ್ತದೆ.

**4. ಹೊನ್ನನಿಗೂ ಕುದುರೆಗೂ ನಡೆದ ಸಂಭಾಷಣೆಯನ್ನು ಬರೆಯಿರಿ. [3]**

ಹೊನ್ನನು ಕುದುರೆಯ ಮೇಲೆ ಎರಡು ಮೂರು ಸುತ್ತು ಸುತ್ತಿ ಬೇಸರವಾಗಿ ಕುಳಿತನು. ಆಗ ಕುದುರೆಯು "ಯಾಕಪ್ಪ ಮೂರು ಸುತ್ತು ಹೊಡೆದ ಮೇಲೆ ನಿನಗೆ ಆಟ ಬೇಡವೆನಿಸಿತೆ?" ಎಂದು ಕೇಳಿದ್ದಕ್ಕೆ "ಏಕೆ ಗೆಳೆಯ ನಿನಗೆ ಸುಸ್ತಾಯಿತೆ?" ಎಂದು ಹೊನ್ನ ಕೇಳಿದನು. ಅದಕ್ಕೆ ಕುದುರೆಯು " ಬಳ್ಳಿಗೆ ಕಾಯಿ ಭಾರಾನಾ? ಹಾಗೆ ಕುದುರೆಗೆ ಸವಾರ ಹೇಗೆ ಭಾರವಾಗುತ್ತಾನೆ? ಎಂದು ಕೇಳುತ್ತದೆ. ಆಗ ಹೊನ್ನ "ಹಾಗಾದರೆ ನೀನು ಬೆಳ್ಳಗೆ, ತೆಳ್ಳಗಿದ್ದೀಯಾ ಎಂದು ಅರ್ಥವೇ?" ಎಂದು ಕೇಳಿದಕ್ಕೆ "ನಾನು ಹಾಗಂದನೇ?" ಎಂದು ಕುದುರೆ ಮರು ಪ್ರಶ್ನೆ ಕೇಳುತ್ತದೆ. ಆಮೇಲೆ ಹೊನ್ನನು ಕುದುರೆಯ ಪೆಚ್ಚು ಮುಖ ನೋಡಿ ತಾನು ತಮಾಷೆಗೆ ಹಾಗೆಂದೆ ಬೇಸರ ಪಟ್ಟುಕೊಳ್ಳಬೇಡ. ಸವಾರನಿಗೆ ಜೀವನ ಬೇಸರವಾಗಿ ಸನ್ಯಾಸಿಯಾಗಿ ಓಡಿಹೋಗಲೂ ಕುದುರೆ ಬೇಕೆನ್ನುತ್ತಾನೆ. ಈಗ್ಯಾಕೆ ಸನ್ಯಾಸದ ಮಾತುಏಕೆ ಇಷ್ಟೊಂದು ಬೇಸರ ಎಂದು ಕುದುರೆ ಪ್ರಶ್ನಿಸಿದ್ದಕ್ಕೆ ಹೂವಮ್ಮ ದಿನಾ ಹೂ ತರುವವಳು ಎಂದು ಹೇಳಹೊರಟವನಿಗೆ, ಹೂವನ್ನು, ಹುಲ್ಲು ಅಂದುಕೊಂಡೆ ಎಂದು ಕುದುರೆ ಹೊನ್ನನನ್ನು ಕೆಣಕಿ ಬೈಸಿಕೊಳ್ಳುತ್ತದೆ.

## Question 15

**"ಏನಕ್ಕಾ.... ಗಿಡಕ್ಕೆ ನೀರು ಹಾಕೋದಕ್ಕೆ ನೀನೇ ಬಂದಿದೀ ಈವತ್ತು .......?**

**ಮರಾ ಗಿಡಕ್ಕೆ ನೀರು ಹಾಕೋದಕ್ಕೆ ಮನುಶ್ಯರಲ್ದೆ ಮರ ಬರ್ತಾವಾ ಮತ್ತೇ?" [ ದೃಶ್ಯ -9 ]**

**ಪ್ರಶ್ನೆಗಳು:**

**1. ಬೆಳ್ಳಿ ತನ್ನ ಅಂಗೈಯನ್ನು ತೋರಿಸಿದಾಗ ಕುದುರೆ ಏನು ಹೇಳುತ್ತದೆ? ಅದಕ್ಕೆ ಬೆಳ್ಳಿಯ ಉತ್ತರವೇನು?[2]**

ಬೆಳ್ಳಿ ಬಾವಿಯಿಂದ ಗಡಗಡ ನೀರು ಸೇದಿ ಅಂಗೈ ಹೇಗಾಗಿದೆ ನೋಡು ಎಂದು ಕುದುರೆಗೆ ತೋರಿಸಿದಾಗ, ಅಣ್ಣನಿಗೆ ತೋರಿಸು, ಅಣ್ಣ ಮುದ್ದುಗಿದ್ದು ಮಾಡಿಸುತ್ತಾನೆ, ನಿನ್ನಣ್ಣನಿಗೆ ನೀನೆಂದರೆ ಪ್ರಾಣ ಎನ್ನುತ್ತದೆ. ಅದಕ್ಕೆ ಬೆಳ್ಳಿಯು "ಹುಚ್ಚಪ್ಪ ಅತ್ತಿಗೆ ಕೂಡ ಸರಸವಾಡೋಕೆ ಸಮಯ ಇಲ್ಲ ಅಣ್ಣಂಗೆ, ನನ್ನ ಗೋಳು ಕೇಳೋಕೆ ಬರ್ತಾನಾ? ಅದೆಲ್ಲಾ ಹಳೇ ಕಥೆ ಬಿಡು" ಎಂದು ಉತ್ತರಿಸುತ್ತಾಳೆ.

**2. "ಏನೋ…ಬಿಡು…ನನ್ನ ಕುದುರೆ ಬುದ್ದಿಗೆ ಇದೆಲ್ಲಾ ತಿಳಿಯೋದಿಲ್ಲ…"ಸಂದರ್ಭದೊಡನೆ ವಿವರಿಸಿ. [2]**

ಈ ವಾಕ್ಯವನ್ನು ಎಚ್.ಎಸ್.ವೆಂಕಟೇಶ ಮೂರ್ತಿಯವರು ಬರೆದಿರುವ 'ಹೂವಿ' ನಾಟಕದ ಒಂಭತ್ತನೆಯ ದೃಶ್ಯದಿಂದ ಆರಿಸಲಾಗಿದೆ. ಈ ಮಾತನ್ನು ಕುದುರೆ ಬೆಳ್ಳಿಗೆ ಹೇಳಿತು.
ಬೆಳ್ಳಿ ತನ್ನ ಅಣ್ಣ ಮದುವೆಯಾದ ಮೇಲೆ ಬದಲಾಗಿದ್ದಾನೆ. ಅವನಿಗೆ ಅತ್ತಿಗೆಯ ಜೊತೆ ಸರಸವಾಡಲು ಸಮಯವಿಲ್ಲ. ಹಿಂದಿನ ರಾತ್ರಿ ಹೂವಿನ ರಾಶಿ ಕಿಟಕಿಯ ಆಚೆ ಬಿದ್ದಿತ್ತು. ಅವರು ಹೂವನ್ನೇ ಹಾಸಿಕೊಂಡು ಮಲಗಿರಬೇಕು. ಮಲಗಿದರೆ ಮಲಗಲಿ ನನಗೆ ಎರಡು ಹೂವನ್ನಾದರೂ ಕೊಡಬಹುದಿತ್ತಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಕ್ಕೆ ಕುದುರೆ ಏನೂ ಹೇಳದೆ ಈ ರೀತಿ ಹೇಳಿತು.

**3. ಬೆಳ್ಳಿಯ ಮಾತಿನ ವರಸೆಯೇ ಬೇರೆಯಾಗಿದೆ ಎಂದು ಕುದುರೆಗೆ ಅನ್ನಿಸಲು ಕಾರಣವೇನು? ವಿವರಿಸಿ. [3]**

ಯಾವಾಗಲೂ ಗೌಡರ ತೋಟಕ್ಕೆ ಆಳುಗಳು ಬಂದು ಗಿಡಗಳಿಗೆ ನೀರು ಎರೆಯುತ್ತಿದ್ದರು. ಆದರೆ ಮದುವೆಯ ಮರುದಿನ ಬೆಳ್ಳಿ ಕೊಡದಲ್ಲಿ ನೀರು ಹಿಡಿದು ಬಂದಾಗ ಕುದುರೆ ಆಶ್ಚರ್ಯದಿಂದ ಆಳುಗಳು ಬಂದಿಲ್ಲವೇ? ಎಂದು ಕೇಳಿತು. ಅವಳು ಬೇಸರದಿಂದ ತಾನೇ ಬಿಟ್ಟಿ ಬಿದ್ದಿರುವಾಗ ಹುಡುಗಿಯರು ಏಕೆ ಬೇಕೆಂದಿದ್ದಕ್ಕೆ ಅವಳ ಮಾತಿನ ವರಸೆಯನ್ನು ಕೇಳಿ ಈ ರೀತಿ ಮಾತನಾಡಲು ಏನೋ ಬಲವಾದ ಕಾರಣವಿರಬೇಕೆಂದು ಊಹಿಸುತ್ತದೆ.

**4. ಬೆಳ್ಳಿ ಕುದುರೆ ಮುಂದೆ ಹೇಳಿದ್ದು ತಪ್ಪಾಯಿತೆಂದು ಏಕೆ ಹೇಳುತ್ತಾಳೆ? ವಿವರಿಸಿ. [3]**

ಬೆಳ್ಳಿ ತನ್ನ ಮನೆಗೆ ಅತ್ತಿಗೆ ಬಂದಾಗಿನಿಂದ ಎಲ್ಲಾ ಅವಳದೇ ಕಾರುಬಾರು ಎಂದಳು. ಕುದುರೆ ತನಗೂ ಬೆಳಗಿನಿಂದ ಹುರುಳಿ ನೀರನ್ನೂ ಹಾಕಿಲ್ಲ ಎಂದು ಹೇಳಿದಾಗ ತನಗೇನೂ ತಿಳಿಯದು ಎಂದು ಹೇಳಿ ಅತ್ತಿಗೆಯನ್ನು ದೂರಿದ್ದಕ್ಕೆ ಕುದುರೆ ಎಲ್ಲದಕ್ಕೂ ಅತ್ತಿಗೆಯನ್ನೇ ದೂರುತ್ತಿದ್ದಾಳಲ್ಲಾ ಎಂದು "ಅನಿಷ್ಟಕ್ಕೆಲ್ಲಾ ಶನೀಶ್ವರ ಗುರಿ" ಎನ್ನುತ್ತದೆ. ಆ ಮಾತನ್ನು ಕೇಳಿ ಕೋಪಗೊಂಡ ಬೆಳ್ಳಿ ಅದೇ ಮಾತನ್ನು ಮತ್ತೆ ಅಣಕಿಸುತ್ತಾ ಹೇಳಿ ಕುದುರೆಯ ಮುಂದೆ ತನ್ನ ಗೋಳು ಹೇಳಿಕೊಂಡದ್ದು ತನ್ನದೇ ತಪ್ಪು ಎಂದುಕೊಳ್ಳುತ್ತಾಳೆ.

## Question 16

**ಹೂವಿಯನ್ನು ಕಾಣದೆ ಆರಸುತ್ತಾ ಕುದುರೆ ಏರಿ ಹೊರಟ ಹೊನ್ನ ಹೂವಿ ಇರುವ ಜಾಗವನ್ನು ಪತ್ತೆ ಮಾಡುತ್ತಾನೆ. ಅವರಿಬ್ಬರ ಸಮಾಗಮವಾಗುತ್ತದೆ……. [ದೃಶ್ಯ-14]**

**1."ಮರವಾದೋಳಿಗೇ ಗೊತ್ತು ಮನುಷ್ಯಳಾಗೋ ಗುಟ್ಟು …. ಆಕೆನೇ ಕೇಳು ತಮ್ಮ." [2]**

ಈ ವಾಕ್ಯವನ್ನು ಎಚ್.ಎಸ್.ವೆಂಕಟೇಶ ಮೂರ್ತಿಯವರು ಬರೆದಿರುವ 'ಹೂವಿ' ನಾಟಕದ ೧೪ನೆಯ ದೃಶ್ಯದಿಂದ ಆರಿಸಲಾಗಿದೆ. ಈ ಮಾತನ್ನು ರೈತನು ಹೊನ್ನನಿಗೆ ಹೇಳಿದನು.
ಮರವಾಗಿರೋ ಹೂವಿ ಮಾನವಳಾಗುವಗುಟ್ಟು ಅವಳಿಗೇ ಗೊತ್ತಿರುತ್ತದೆ. ಎಂದು ರೈತ ತನ್ನ ಅನುಭವದ ಜ್ಞಾನದಿಂದ ಹೇಳುತ್ತಾನೆ. ಏಕೆಂದರೆ ಮಾನವಳಾಗಿರುವ ಅವಳಿಗೆ ಮರವಾಗುವ ಗುಟ್ಟು ಅಥವ ಶಕ್ತಿ ಇದ್ದ ಮೇಲೆ ಮತ್ತೆ ಮಾನವಳಾಗುವ ಗುಟ್ಟು ತಿಳಿದೇ ಇರಬೇಕೆಂಬುದು ರೈತನ ಊಹೆ. ಆದ್ದರಿಂದ ಅವಳನ್ನೇ ಕೇಳಬೇಕೆಂದು ಹೇಳುತ್ತಾನೆ.

**2.ಹೂವಿಯನ್ನು ಹುಡುಕುತ್ತಾ ಹೊರಟ ಹೊನ್ನನಿಗೆ ಹೂವಿ ಇರುವ ಜಾಗ ಪತ್ತೆಯಾದದ್ದು ಹೇಗೆ? [2]**

ಹೂವಿಯನ್ನು ಹುಡುಕುತ್ತಾ ಹೊರಟ ಹೊನ್ನನಿಗೆ ಗಾಳಿಯಲ್ಲಿ ಸುರಹೊನ್ನೆ ಹೂವಿನ ಪರಿಮಳ ತೇಲಿ ಬರುತ್ತದೆ. ಈ ಹೂವಿನ ಪರಿಮಳ ತನಗೆ ಮೊದಲೇ ಚಿರಪರಿಚಿತವಾಗಿದ್ದು. ಅದು ಅದೇ ಹೂವಿನದು ಎಂದು ತೀರ್ಮಾನಿಸುತ್ತನೆ. ಈ ಹೂವಿನ ಸುಗಂಧ ತೇಲಿ ಬಂದ ಗಾಳಿಯನ್ನೇ ಅನುಸರಿಸಿ ಹೊರಟಾಗ ಮರದ ಬಳಿ ರೈತನನ್ನು, ಅರೆಮಾನವ ಅರೆಮರವಾಗಿ ನಿಂತಿರುವ ತನ್ನ ಹೂವಿಯನ್ನು ಕಂಡು ಆನಂದಪಡುತ್ತಾನೆ.

**3.ಹೊನ್ನ ರೈತನಿಗೆ ಏನು ಹೇಳಿದ? ಅದಕ್ಕೆ ರೈತ ನೀಡಿದ ಉತ್ತರವೇನು? [3]**

ಹೂವಿನ ಸುಗಂಧವನ್ನು ಅರಸುತ್ತಾ ಬಂದ ಹೊನ್ನನಿಗೆ ಮರವಾದ ಹೂವಿ ಮತ್ತು ರೈತನು ಆ ಮರಕ್ಕೆ ಆರೈಕೆ ಮಾಡುತ್ತಿರುವ ದೃಶ್ಯ ಕಾಣುತ್ತದೆ. ಆ ರೈತನ ಬಳಿ ಈ ಮರ ತನ್ನ ಹೆಂಡತಿ ಹೂವಮ್ಮ ತಾನು ಅವಳ ಗಂಡ

ಹೊನ್ನ ಎಂದು ಹೇಳುತ್ತಾನೆ. ಆಗ ರೈತನು ತಾನು ಮಾಡಿದ ಆರೈಕೆಯಿಂದ ಮರ ಚಿಗುರಿ, ಎಲೆ, ಹೂವು ಬಿಟ್ಟಿತೇ ವಿನಹ ಈ ಮುಚ್ಚಿದ ಕಣ್ಣು ಮಾತ್ರ ಏನು ಮಾಡಿದರೂ ತೆರೆದಿಲ್ಲವೆಂದು ಆತಂಕದಿಂದ ಹೇಳುತ್ತಾನೆ.

**4.ಮರವಾಗಿರೋ ಹೂವಿಯನ್ನು ಮತ್ತೆ ಮಾನವಳನ್ನಾಗಿ ಮಾಡಲು ಮುತ್ತೈದೆಯರು ಏನೇನು ಮಾಡುತ್ತಾರೆ? [3]**

ಮೊದಲು ಹಸಿರು ಸೀರೆ, ಹಸಿರು ಬಳೆ, ಎಲೆ ಅಡಿಕೆ, ಕಳಶ, ಕನ್ನಡಿ ಹಿಡಿದು ಬಂದ ಮುತ್ತೈದೆಯರು ಮುದುಕನ ಕೈ ಮುಟ್ಟಿಸಿ ಮರಕ್ಕೆ ತೊಡಿಸುತ್ತಾರೆ. ಆಮೇಲೆ ಹೂವಿಯನ್ನು ಬನದಮ್ಮನ ಕಂದ ನಿನ್ನ ಗಂಡ ಹೊನ್ನಯ್ಯ ಬಂದು ಹಸಿರು ಚಪ್ಪರದಲ್ಲಿ ನಿಂತಿದ್ದಾನೆಂದು ಹೇಳುತ್ತಾರೆ.
ಅವಳಿಗೆ ಹರಿಶಿನದ ಎಣ್ಣೆ ಹಚ್ಚಿ, ಹಸಿರು ಉಡುಗೆ ಉಡಿಸಿ, ಗಿಳಿ ಹಸಿರು ಬಣ್ಣದ ಬಳೆ ತೊಡಿಸಿ, ಹಣೆಗೆ ತಿಲಕ ಇಟ್ಟು ಹಸೆಮಣೆಗೆ ಬಾ, ಕಣ್ಣು ತೆರೆ ಎಂದು ಕರೆಯುತ್ತಾರೆ. ಮಡಿಲಕ್ಕಿ ತುಂಬಿ, ಅವಳ ಕಣ್ಣೀರನ್ನು ಒರೆಸಿಆಪಾದ ಮಸ್ತಕ (ತಲೆಯಿಂದ ಪಾದದವರೆಗೆ) ನೀರನ್ನು ಸುರಿದು ಅವಳನ್ನು ಕಣ್ಣು ತೆರೆಯುವಂತೆ ಕೇಳಿದಾಗ ಮರವಾಗಿದ್ದ ಹೂವಿ ಮಾನವಳಾಗುತ್ತಾಳೆ.

**************